Business of the House.

Mr. SPEAKER.—I wish to inform the House that I have recieved various communications regarding the change in party affiliations. I am passing them on to the Secretary for necessary action before the next Session.

ಶ್ರೀ ಎಸ್. ಗೋಪಾಲ ಗೌಡ.—ಇತ್ತೀಚೆಗೆ ಮಂತ್ರಿಮಂಡಲದಲ್ಲೂ ಬದಲಾವಣೆಯಾಗಿದೆ. ಆದರೆ ಅದರಂತೆ ಯಾರೂ ಸ್ಥಳ ಬದಲಾವಣೆ ಮಾಡಿಲ್ಲ. ಇದ್ದಲ್ಲೇ ಇದ್ದಾರೆ.

ಅಧ್ಯಕ್ಷರು.—ಪೋರ್ಟ್‌ಫೋಲಿಯೋಗಳ ಪ್ರಕಾರ ಸೀಟುಗಳನ್ನು ಅರೇಂಜ್ ಮಾಡಿಲ್ಲ. ಜನರ ಪ್ರಕಾರ ಅದನ್ನು ಮಾಡಲಾಗಿದೆ.

ಶ್ರೀ ಕೆ. ಲಕ್ಕಪ್ಪ.—ನಾಳೆಯೂ ಈ ಸಭೆ ಇದೆಯೇ ?

Mr. SPEAKER.—As soon as the work is over, Members can go.

MYSORE MOTOR VEHICLES TAXATION (AMENDMENT) BILL, 1965

Motion to consider.

Sri D. DEVARAJ URS.—Sir, I beg to move :

" That the Mysore Motor Vehicles Taxation (Amendment) Bill, 1965, be taken into consideration."

Mr. SPEAKER.—Motion moved :

" That the Mysore Motor Vehicles Taxation (Amendment) Bill, 1965, be taken into consideration."

Sri D. DEVARAJ URS.—The objects and reasons with which the rates of levy are imposed have been stated. It is with a view to rationalise the existing rates, it is proposed to levy the increased rates of taxes on motor vehicles to bring to the level of Madras State and also with a view to get some more revenue for increasing the revenue resources of the State for the emergency period and as well as for the IV Plan period. As it is already stated, it is likely to yield an increased revenue of roughly Rs. 23 lakhs by these increased rates. I commend this for the acceptance of this House.

† ಶ್ರೀ ಎಸ್. ಎಂ. ಕೃಷ್ಣ.—ಈ ಮಸೂದೆಗಳನ್ನು ಮಂಡಿಸುವಾಗ ಸರ್ಕಾರ ಹೇಳುವುದು ಒಂದು ಪಲ್ಲವಿ ; ಮದರಾಸಿನಲ್ಲಿ ಅವರು ಮಾಡಿದರು, ನಾವೂ ಇಲ್ಲಿ ಮಾಡುತ್ತೇವೆ ಎಂದು ಅನ್ನುವುದು ಆಗಿದೆ. ಮದರಾಸಿನಲ್ಲಿ ಇನ್ನೂ ಏನೇನೋ ಮಾಡಿದರು ಅದನ್ನೆಲ್ಲಾ ಏಕೆ ಇಲ್ಲಿ ಮೈಸೂರು ಸಂಸ್ಥಾನದಲ್ಲಿ ಮಾಡುವುದಿಲ್ಲ. ಇದನ್ನು ಇಷ್ಟು ಕಠೋರವಾಗಿ ಏಕೆ ಹೇಳುತ್ತೇನೆ ಅನ್ನುವುದನ್ನು ಶ್ರೀಮಾನ್ ಅರಸ್ ಅವರು ಅರ್ಥಮಾಡಿಕೊಳ್ಳಬೇಕು. ತುರ್ತು ಪರಿಸ್ಥಿತಿ ಬಂದಿದೆ. ಆದ್ದರಿಂದ ಸುಮಾರು 23 ಲಕ್ಷ ರೂಪಾಯಿಗಳನ್ನು ಈ ವಿಧೇಯಕದಿಂದ ಬರಮಾಡಿಕೊಳ್ಳುತ್ತೇವೆ ಎಂದು ಹೇಳುತ್ತೀರಿ, ಒಪ್ಪುತ್ತೇನೆ. 23 ಲಕ್ಷ ರೂಪಾಯಿ ಎಂದು ಹೇಳುತ್ತೀರಿ ಇದರಿಂದ 30-40 ಲಕ್ಷ ರೂಪಾಯಿಗಳು ಬರುವುದಕ್ಕೆ ಸಾಧ್ಯವಿದೆ. ಆದರೆ ಹೆಚ್ಚು ಗಳಿಸಿದ ಹಣವನ್ನು ಹೇಗೆ ಖರ್ಚು ಮಾಡುತ್ತೀರಿ ಎನ್ನುವುದು ಬಹಳ ಪ್ರಾಮುಖ್ಯವಾದ ವಿಚಾರ. ಇನ್ನೂ ಒಂದು ಕೆಡಕು ಏನಾಗುತ್ತದೆ ಎಂದರೆ, ಮೋಟಾರು ವೆಹಿಕಲ್‌ಗಳ ಮೇಲೆ ಜಾಸ್ತಿಯಾಗಿ ಟ್ಯಾಕ್ಸು ಹಾಕುವುದರಿಂದ ಉತ್ತರೋತ್ತರ ಅದು

ಸಾಮಾನ್ಯ ಜನರ ಮೇಲೆ ಪರ್ಗಾವಣೆಯಾಗತಕ್ಕ ಕೆಲಸಕಾರ್ಯಗಳೂ ಕೂಡ ನಡೆಯುತ್ತವೆ. ಟ್ರಕ್ಸ್ ಮೇಲೆ ತೆರಿಗೆ ಹಾಕುವುದರಿಂದ ಜನ ಒಂದು ಕಡೆಯಿಂದ ಇನ್ನೊಂದು ಕಡೆಗೆ ಪದಾರ್ಥಗಳನ್ನು ಕೊಂಡು ಹೋಗುವವರಮೇಲೆ ಮೋಟಾರು ಮಾಲೀಕರು ಅದನ್ನು ಪರ್ಗಾವಣೆ ಮಾಡುತ್ತಾರೆ. ಇದು ನಮ್ಮ ದಿನನಿತ್ಯ ಜೀವನದಲ್ಲಿ ಕಂಡುಬರತಕ್ಕ ವಿಷಯ. ಒಬ್ಬ ವರ್ತಕ ಮಂಗಳೂರಿನಿಂದ ಬರತಕ್ಕವನು ತನ್ನ ಪದಾರ್ಥಗಳನ್ನು ಬೆಂಗಳೂರಿಗೆ ಪರ್ಗಾವಣೆ ಮಾಡಿಕೊಳ್ಳಬೇಕೆಂದರೆ ಲಾರಿಯವನನ್ನು ಹಿಡಿಯಬೇಕು. ತನ್ನ ಸಾಮಾನುಗಳನ್ನು ಸಾಗಿಸಿಕೊಳ್ಳಬೇಕು. ಮೋಟಾರ್ ವೆಹಿಕಲ್‌ಗಳ ಮೇಲೆ ತೆರಿಗೆ ಜಾಸ್ತಿ ಮಾಡಿದ್ದೀರಿ ಎಂದು ಹೇಳಿದರೆ ಅವನ ರೇಟ್ ಕೂಡ ಜಾಸ್ತಿಯಾಗುತ್ತದೆ. ಅದರಿಂದ ವರ್ತಕನಿಗೆ ಜಾಸ್ತಿ ಖರ್ಚಾಗುತ್ತದೆ. ಅವನು ಜಾಸ್ತಿ ಹಣ ಖರ್ಚು ಮಾಡುವುದರಿಂದ ಅದನ್ನು ಬಳಕೆದಾರರಿಂದ ಪಡೆಯುವುದಕ್ಕೆ ಪ್ರಯತ್ನ ಮಾಡುತ್ತಾನೆ. ಇದು ಒಂದು chain reaction ಈ ಒಂದು ಸಣ್ಣ ಕಾನೂನು ಏನು ಮಾಡುತ್ತೀರಿ ಇದರಿಂದ ಬಳಕೆದಾರರಿಗೆ, ಸಾಮಾನ್ಯ ಜನಕ್ಕೆ ಕಡೆಯುದಾಗಿ ತೊಂದರೆಯಾಗುತ್ತದೆ ಎಂಬ ಶಂಕೆ ನನ್ನನ್ನು ಕೊಂಚ ಬಾಧಿಸುತ್ತಾ ಇದೆ. ಮತ್ತೆ ಈಗಾಗಲೇ ನಮ್ಮ ನಿತ್ಯ ಜೀವನದಲ್ಲಿ ಕಂಡುಬರತಕ್ಕದ್ದು ಏರುತ್ತಾ ಇರತಕ್ಕ ಬೆಲೆಗಳು. ಅವುಗಳನ್ನು ತಡೆಹಿಡಿಯುವುದಕ್ಕೆ ಸಾಕಾದಷ್ಟು ಪರಿಣಾಮಕಾರಿಯಾಗಿ ಹಿಡಿತದಲ್ಲಿ ಇಟ್ಟುಕೊಳ್ಳುವುದಕ್ಕೆ ನಿಮಗೆ ಸಾಧ್ಯವಾಗಲಿಲ್ಲ. ರಾಜ್ಯ ಸರ್ಕಾರ, ಈ ದೇಶದ ಸರ್ಕಾರದ ಹೊಣೆ ಹೊತ್ತಿರತಕ್ಕ ಜನ ಇದನ್ನು ಅಗತ್ಯವಾಗಿ ಮಾಡಬೇಕಾಗಿತ್ತು. ಆದರೆ ಕಾರಣಾಂತರದಿಂದ ಮಾಡಿಲ್ಲ. ಸಾಕಾದಷ್ಟು ಇದರ ಬಗ್ಗೆ ಕಳಕಳಿ ಇಲ್ಲದೇ ಅಥವಾ ಪಟ್ಟಭದ್ರ ಹಿತಾಸಕ್ತಿಗಳ ವಶಕ್ಕೆ ಸರ್ಕಾರ ಸಿಕ್ಕಿ ಹಾಕಿಕೊಂಡಿರುವುದರಿಂದ ಬೆಲೆಗಳನ್ನು ತಪೆ ಹಿಡಿಯುವುದಕ್ಕೆ ಸಾಧ್ಯವಾಗಿಲ್ಲ. ನನ್ನೆ ದಿವಸ ಗೃಹ ಮಂತ್ರಿ ನಂದಾ ಅವರು ತಮ್ಮ ಅನಹಾಯಕತೆಯನ್ನು ವ್ಯಕ್ತ ಪಡಿಸಿದ್ದಾರೆ. ಅವರು I am a disillusioned Socialist ಎಂದು ಹೇಳುತ್ತಾರೆ. ಎರಡು ಮೂರು ವರ್ಷಗಳ ಕಾಲ ಪ್ರಯತ್ನ ಪಟ್ಟ ಮೇಲೆ ಇದು ಅವರಿಗೆ ಗೊತ್ತಾಯಿತು. ಈ ಸರ್ಕಾರ ಇದೇ ರೀತಿ ನಡೆದುಕೊಂಡು ಹೋದರೆ ಸಮತಾವಾದ ರಾಜ್ಯ ಸ್ಥಾಪನೆ ಮಾಡುವುದಂತೂ ಇರಲಿ, ಅದರ ಹೊರಾಂಗಣವನ್ನೂ ಕೂಡ ಮುಟ್ಟುವುದಕ್ಕೆ ಸಾಧ್ಯವಿಲ್ಲ ಎಂದು ನಂದಾ ಅವರು ಈಗ ಅರ್ಥಮಾಡಿಕೊಂಡಿದ್ದಾರೆ. ಈಗ ನಾವು ಇಂತಹ ವಿಧೇಯಕವನ್ನು ತರುವುದರಿಂದ ಮೋಟಾರ್ ಓನರ್ಸ್‌ಗೆ ಕೊಡುವುದಕ್ಕೆ ಶಕ್ತಿ ಇದೆ. ಅವರು ಕೊಡಬಹುದು, ಆದರೆ ಅವರು ಅದನ್ನು ಬಾಕಿಯವರ ಮೇಲೆ ಪರ್ಗಾವಣೆ ಮಾಡುವುದನ್ನು ತಡೆ ಹಿಡಿಯುವುದಕ್ಕೆ ಏನು ಮಾಡುವುದು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಈ ಹೆಚ್ಚುವರಿ ಆದಾಯ ಈ ವಿಧೇಯಕದಿಂದ ಏನು ಬರುತ್ತದೆ. ಅದನ್ನು ಯಾವ ರೀತಿ ಉಪಯೋಗಿಸುತ್ತೀರಿ, ವಿನಿಯೋಗ ಮಾಡುತ್ತೀರಿ ಎನ್ನುವುದರ ಬಗ್ಗೆ ಕೂಡ ಸಾಕಾದಷ್ಟು ನಂಬಿಕೆಯಾಗಲಿ ಉತ್ಸಾಹವಾಗಲಿ ನಮ್ಮಲ್ಲಿ ಇಲ್ಲದೇ ಇರುವುದರಿಂದ ನಾನು ಇದರ ಬಗ್ಗೆ ನನ್ನ ಈ ಶಂಕೆಗಳು, ಅನುಮಾನಗಳನ್ನು ಈ ನಭೆಯ ಮುಂದೆ ಇಟ್ಟಿದ್ದೇನೆ.

†ಶ್ರೀ ಸಿದ್ದಯ್ಯ ಕಾಶೀಮಠ್. —ಗುಡ್ಸ್ ವೆಹಿಕಲ್‌ಸ್ ಮೇಲೆ ಹೆಚ್ಚಿನದಾದ ಟ್ಯಾಕ್ಸ್ ಹಾಕುವ ಈ ಮಸೂದೆಯನ್ನು ನಾನು ವಿರೋಧಿಸುತ್ತೇನೆ. ತಾವು ತಮ್ಮ ಧ್ಯೇಯೋದ್ದೇಶಗಳಲ್ಲಿ :

> "It is considered necessary that for the effective implementation of the Fourth Five-Year Plan, ways and means for the additional resources have to be devised for meeting the increased expenditure that has to be incurred to fulfil the financial and physical targets fixed to be completed and hence the levy of increased rates of taxes in respect of goods vehicles is inevitable."

ಎಂದು ಹೇಳಿದ್ದೀರಿ. ತುರ್ತುಪರಸ್ಥಿತಿಯಲ್ಲಿ ಇದ್ದೇವೆ, ಮದರಾಸಿನಲ್ಲಿ ಅವರು ಹೆಚ್ಚು ಮಾಡಿದ್ದಾರೆ, ಅದೇ ರೀತಿಯಾಗಿ ಇಲ್ಲೂ ಕೂಡ ಅದನ್ನು ನಾವು ಅಳವಡಿಸಿದ್ದೇವೆ ಎಂದು ಹೇಳುವುದಾದರೂ ಮದರಾಸಿನಲ್ಲಿ ಎಷ್ಟು ಗುಡ್ಸ್ ವೆಹಿಕಲ್ಸ್ ಇವೆ. ಎಂಬುದನ್ನು ನೋಡಿಕೊಂಡು ಅವರು ಹಾಕಿದ್ದಾರೆ. ನಮ್ಮ ರಾಜ್ಯದಲ್ಲಿ ಎಷ್ಟು ಗುಡ್ಸ್ ವೆಹಿಕಲ್ಸ್ ಇವೆ ಎಂಬುದನ್ನು ನೋಡಿಕೊಂಡು, ಅವುಗಳಿಂದ ಬರತಕ್ಕ ಉತ್ಪನ್ನ ಏನು ಎಂಬುದರ ಮೇಲೆ ನಾವು ಟ್ಯಾಕ್ಸ್ ಹಾಕಬೇಕೇ ಹೊರತು ಅವರು ಹಾಕಿದ್ದಾರೆ ಎಂದ ಮಾತ್ರಕ್ಕೆ ನಾವು ಹೆಚ್ಚು ಮಾಡುವುದು ಎಂದರೆ ಬಹಳ ಕಠಿಣವಾದ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ. ಈಗಾಗಲೇ ಮಾನ್ಯ ಸ್ನೇಹಿತರು ಹೇಳಿದ ಹಾಗೆ ಟ್ರಕ್ ಮಾಲೀಕರು ಟ್ಯಾಕ್ಸ್ ಕೊಡುವುದಕ್ಕೆ ಹಿಂಜರಿಯುತ್ತಾ ಇಲ್ಲ. ನೆನ್ನೆ ದಿವಸ ಈ ನಭೆಯಲ್ಲಿ ಮತ್ತೊಂದು ಬಿಲ್ ಪಾಸ್ ಆಯಿತು, ಪೆಟ್ರೋಲ್ ಹೊರತಾಗಿ ಇನ್ನುಳಿದ ಎಣ್ಣೆಗಳಿಗೆ 5 ಎನ್. ಪಿ. ಲೀಟರ್‌ಗೆ ಇದ್ದುದನ್ನು

(ಶ್ರೀ ಸಿದ್ದಯ್ಯ ಕಾಶೀಮಠ್)

8 ಎನ್. ಪಿ. ವರೆಗೂ ಏರಿಸಿದ್ದೇವೆ. ಅದನ್ನೂ ಕೂಡ ಗಣನೆಗೆ ತೆಗೆದುಕೊಂಡರೆ ಇದು ಸಾಮಾನ್ಯ ಬಳಕೆದಾರರ ಮೇಲೆ ಬೀಳತಕ್ಕ ತೆರಿಗೆಯಾಗುತ್ತದೆ. ಮೊನ್ನೆ ದಿವಸ ಇದೇ ಸಭೆಯಲ್ಲಿ ಶ್ರೀಮಾನ್ ಬಿ. ಜೆ. ಲಿಂಗೇಗೌಡರು ಗುಲ್ಬರ್ಗಾದಿಂದ ಚೆನ್ನಪಟ್ಟಣಕ್ಕೆ ಬರಲು ಒಂದೊಂದು ಟೀಲಕ್ಕೆ ಹನ್ನೊಂದೂವರೆ ರೂಪಾಯಿ ಬಾಡಿಗೆ ಕೊಡಬೇಕಾಯಿತು ಎಂದು ಹೇಳಿದರು. ಹನ್ನೊಂದೂವರೆ ರೂಪಾಯಿ ಇದ್ದದ್ದು ಇನ್ನು ಮುಂದೆ ಈ ಟ್ಯಾಕ್ಸನ್ನು ನೋಡಿದಾಗ 15 ರೂಪಾಯಿಗಳವರೆಗೂ ಬರಬಹುದು. ಆದ್ದರಿಂದ ತಾವು ಯಾವುದೇ ತೆರಿಗೆಯನ್ನು ಏರಿಸಿದರೂ ಕೂಡ ಅದು ಸಾಮಾನ್ಯ ಜನರ ಮೇಲೆ ಹೆಚ್ಚಿನ ತೆರಿಗೆ ಆಗುತ್ತದೆಯೇ ಹೊರತು ಟ್ರಕ್ ಮಾಲೀಕರ ಮೇಲೆ ಅದು ಬೀಳುವುದಿಲ್ಲ ಎಂದು ಹೇಳುತ್ತೇನೆ. ಈಗ ಇದ್ದದ್ದು ಸರಿಯಾಗಿದೆ. ಅಷ್ಟೇ ಅಲ್ಲ, ಇದನ್ನು ಅಳವಡಿಸುವಾಗ ರೇಟ್ ನಿಗದಿ ಮಾಡುವಾಗ ಯಾವ ಕಾನೂನನ್ನು ಅನುಸರಿಸಿದ್ದೀರೋ ಏನೋ ಗೊತ್ತಾಗುವುದಿಲ್ಲ, ಇದನ್ನು ತಾವು ಸ್ವಲ್ಪ ನೋಡಬೇಕು. ಹಿಂದಿನ ರೇಟ್ ಮತ್ತು ಈಗ ತಾವು ಹೆಚ್ಚು ಮಾಡಿರತಕ್ಕ ರೇಟ್ ಯಾವ ರೀತಿ ಇವೆ ಎಂಬುದರ ಬಗ್ಗೆ ಒಂದೆರಡು ವಿಷಯಗಳನ್ನು ಹೇಳುತ್ತೇನೆ. ಪ್ಯಾರಾ 7 ಐಟಂ ನಂಬರ್ (ಎಫ್) 270 ಈಗಿನದು, ಹೋದ ಸಲ 252 ಇದೆ. (ಜಿ) ನಲ್ಲಿ 50 ರೂಪಾಯಿ ಮತ್ತು 75 ರೂಪಾಯಿ ವ್ಯತ್ಯಾಸ ಇದೆ. ಈ ರೀತಿ ಒಂದು ಕಡೆಯಲ್ಲಿ ಹೆಚ್ಚು ಮತ್ತೊಂದು ಕಡೆಯಲ್ಲಿ ಕಡಿಮೆ ಮಾಡುವುದು ಸರಿಯಲ್ಲ. ಇದನ್ನು ಸರಿಯಾದ ರೀತಿಯಲ್ಲಿ ಮಾಡಬೇಕು. ಇದೇ ರೀತಿ ಟಿಲ್ಲರ್ಸ್ ವಿಚಾರದಲ್ಲೂ ಕೂಡ ಹೆಚ್ಚಿನದು ಮಾಡುತ್ತಾ ಇದ್ದೀರಿ. (ಎ) ನಲ್ಲಿ 50 ರೂಪಾಯಿ ಹಾಕಿದ್ದೀರಿ, ಮೊದಲಿನದು 45 ರೂಪಾಯಿ ಇದೆ. (ಬಿ) ನಲ್ಲಿ 99 ರೂಪಾಯಿ ಇದೆ, ಮೊದಲು 90 ರೂಪಾಯಿ ಇತ್ತು. ಈ ರೀತಿ ವ್ಯತ್ಯಾಸಗಳು ಕಂಡುಬರುತ್ತಾ ಇವೆ. ಟಿಲ್ಲರ್ಸ್ ಬಗ್ಗೆ ಹೇಳಬೇಕೆಂದರೆ, ಇದನ್ನು ವ್ಯವಸಾಯಗಾರರು ಹೆಚ್ಚಾಗಿ ಬಳಕೆ ಮಾಡುತ್ತಾರೆ. ಆದ್ದರಿಂದ ಇದಕ್ಕೆ ಬೇರೆಯಾಗಿ ವಿಧಿಸದೇ ಈಗ ಕೊಡುತ್ತಾ ಇರತಕ್ಕ ಟ್ಯಾಕ್ಸ್‌ನಲ್ಲಿ ಇದನ್ನು ಸೇರಿಸಬೇಕೆಂದು ಹೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಎಕ್ಸೆಂಪ್ಷನ್ ಕೊಡುವುದು ಒರಿಜಿನಲ್ ಆಕ್ಟ್‌ನಲ್ಲಿ ಇದೆ.

ಶ್ರೀ ಸಿದ್ದಯ್ಯ ಕಾಶೀಮಠ್.—ಆದರೂ ಕೂಡ ಕಟ್ಟುನಿಟ್ಟಾಗಿ, ನಿರ್ದಿಷ್ಟವಾಗಿ ಇರುವಂತೆ ಮಾಡಬೇಕೆಂದು ಈ ಸಮಯದಲ್ಲಿ ಕೇಳಿಕೊಳ್ಳುತ್ತೇನೆ.

11-30 A.M.

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ತಮ್ಮ ಕೈಯಲ್ಲಿ ಕೊಟ್ಟಿರುವ ಈ ರೋಡ್ ಟ್ರಾನ್ಸ್‌ಪೋರ್ಟನ್ನು ನಡೆಸುವುದಕ್ಕೆ ಎಷ್ಟು ಕಷ್ಟವಿದೆ ಎಂಬುದನ್ನು ಅರ್ಥಮಾಡಿಕೊಂಡಿದ್ದೀರಿ. ಇದರಿಂದ ಗೂಡ್ಸ್ ವೆಹಿಕಲ್ಸ್ ಮೇಲೆ ಟ್ಯಾಕ್ಸ್ ಹೆಚ್ಚು ಮಾಡುವ ಹವ್ಯಾಸಕ್ಕೆ ಕೈಹಾಕುವುದಿಲ್ಲ ಎಂದು ತಿಳಿದುಕೊಂಡಿದ್ದೆ. 1961ರಿಂದ ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್ ಅಸ್ತಿತ್ವಕ್ಕೆ ಬಂದಮೇಲೆ ಬಾಡಿ ಕಟ್ಟುವುದಕ್ಕೆ, ಟೈರ್ಸ್‌ಗೆ ಟ್ಯೂಬ್ಸ್‌ಗೆ ಎಷ್ಟು ಖರ್ಚುವೆಚ್ಚ, ಅಕ್ಸೆಸರೀಸಿಗೆ, ಆಯಿಲ್‌ಗೆ ರೀಟ್ರೇಡ್ ಮಾಡುವುದಕ್ಕೆ ಎಷ್ಟು ಹೆಚ್ಚು ಖರ್ಚು; ಮೈನರ್‌ಚೈನ್ ಮಾಡುವುದಕ್ಕೆ ಎಷ್ಟು ಕಷ್ಟವಾಗಿದೆ ಎನ್ನುವುದು ತಮಗೆ ತಿಳಿದೂ ತಿಳಿದೂ ನಾಲ್ಕನೆಯ ಯೋಜನೆಗೆ ಹಣ ಬೇಕು ಡಿಫಿಷಿಯನ್ಸಿ ಆಗ್‌ಮೆಂಟ್ ಮಾಡುವುದಕ್ಕೋಸ್ಕರ, ರಿಸೋರ್ಸಸ್ ಹೆಚ್ಚು ಮಾಡುವುದಕ್ಕೋಸ್ಕರ ಟ್ಯಾಕ್ಸ್ ಹೆಚ್ಚು ಮಾಡಬೇಕೆಂದಿದ್ದೀರಿ. ನೀವು ಯಾವುದೇ ತರಹ ರೀತಿಯಲ್ಲಿ ಬಡವರಿಗಾಗಲ, ಕನ್ಸ್ಯೂಮರ್ಸಿಗಾಗಲ ಸಹಾಯ ಮಾಡಿದ್ದೀರಾ? ಇದರಿಂದ ಉಪಯೋಗ ಆಗುವುದಕ್ಕೆ ಬದಲಾಗಿ ಅನಾನುಕೂಲವಾಗುತ್ತದೆ ಎಂದು ನಾನು ಹೇಳುತ್ತೇನೆ. ತಂದಿರತಕ್ಕ ರೇಟ್ಸ್ ಡಬ್ಬಲ್ ಮಾಡಿ, ಟ್ರಿಬಲ್ ಮಾಡಿ, ಆದರೆ ರೋಡ್ ಗೂಡ್ಸ್ ಟ್ರಾನ್ಸ್‌ಪೋರ್ಟನಲ್ಲಿ ನ್ಯಾಷನಲೈಸ್ ಮಾಡಿ, ತಮ್ಮ ಕೈಯಲ್ಲಿ ತೆಗೆದುಕೊಂಡು ಏನು ಬೇಕಾದರೂ ಮಾಡಿ. ಇವೊತ್ತು ತಮಗೆ ಹೇಳುತ್ತೇನೆ. ಒಂದು ತಾತಾ ಬೆಂಜ್ ತೆಗೆದುಕೊಳ್ಳಬೇಕಾದರೆ ಬ್ಲಾಕ್ ಮಾರ್ಕೆಟ್‌ನಲ್ಲಿ 42 ಸಾವಿರದಿಂದ 60 ಸಾವಿರ ರೂಪಾಯಿಗಳವರೆಗೆ ಕೊಡಬೇಕು. ಲೇಲ್ಯಾಂಡ್ ಅಂಥ ವೆಹಿಕಲ್ ಗೂಡ್ಸ್ ತೆಗೆದುಕೊಂಡು ಹೋಗುವುದಕ್ಕೆ ಟ್ಯಾಕ್ಸ್ ಕೊಟ್ಟು ಕಾಂಪ್ರಿಹೆನ್ಸೀವ್ ಇನ್‌ಷ್ಯೂರೆನ್ಸ್ ಮಾಡಿದರೆ, 75 ಸಾವಿರ ರೂಪಾಯಿವರೆಗೆ ಆಗುತ್ತದೆ. You can understand how it will hit Goods traffic if a person were to invest a lakh of rupees on it ?

Mr. SPEAKER.—What he invests in blackmarket will be lessened. Unless there is a very large margin of profit, who will purchase it by paying a premium of Rs. 30,000 ? That is why the margin of profit is very high.

Sri C. J. MUCKANNAPPA.—Our Government have miserably failed in raising the economic structure of our people. ಇದನ್ನು ಏತಕ್ಕೆ ಹೇಳುತ್ತೇನೆ ಎಂದರೆ, ಒಂದು ಟಯರಿಗೆ ಐದುನೂರು ರೂಪಾಯಿ ಕೊಡಬೇಕು, ಒಂದು ಲೇಲ್ಯಾಂಡ್, ಬೆನ್ಸ್ ವೆಹಿಕಲ್ ಟೈರ್ ರೀಟ್ರೇಡ್ ಮಾಡಬೇಕಾದರೆ 250-300 ರೂಪಾಯಿ ಆಗುತ್ತದೆ. ಇದನ್ನೆಲ್ಲಾ ನೋಡಿದರೆ ಪ್ಯಾಸೆಂಜರ್ ವೆಹಿಕಲ್ಸ್ ನಡೆಸುವುದಕ್ಕೆ ಎಷ್ಟು ಕಷ್ಟ ಇದೆ ಎಂದು ಗೊತ್ತಾಗುತ್ತದೆ. ಇವೊತ್ತು ಸ್ಪೇರ್‌ಪಾರ್ಟ್ಸ್ ಸಿಕ್ಕುವುದಕ್ಕೆ ತೊಂದರೆಯಾಗಿ ಬೆಂಗಳೂರಿನಿಂದ ಸಿರಾದವರಿಗೆ 75 ಮೈಲಿ ರಸ್ತೆಯಲ್ಲಿ ಬೆನ್ಸ್ ಮತ್ತು ಲೇಲ್ಯಾಂಡ್ ವೆಹಿಕಲ್ಸ್ ಎಷ್ಟು ಮುರಿದು ಬಿದ್ದಿವೆ ಎಂಬುದನ್ನು ನೋಡಬಹುದು. ಸಾಮಾನು ಸಿಕ್ಕದೆ ರಸ್ತೆಯಲ್ಲೇ ಇರುತ್ತವೆ. ಲೇಲ್ಯಾಂಡ್ ವೆಹಿಕಲ್ ಮೇಲೆ ಟ್ಯಾಕ್ಸು ಇನ್‌ಕ್ರೀಸ್ ಮಾಡಿದ್ದೀರಿ. ಹೀಗೆ ಜಾಸ್ತಿ ಮಾಡುತ್ತಾ ಹೋದರೆ ಗೂಡ್ಸ್ ಟ್ರಾನ್ಸ್‌ಪೋರ್ಟ್ ಬಿಸಿನೆಸ್ ಯಾರೂ ನಡೆಸುವುದಿಲ್ಲ. ಇವೊತ್ತು ಶ್ರೀಮಂತರ ಕೈಯಲ್ಲಿ ಬ್ಯಾಂಕಿನವರ ಕೈಯಲ್ಲಿ ಈ ವೆಹಿಕಲ್ಲುಗಳನ್ನು ಹೈಪೊಥಿಕೇಟ್ ಮಾಡಿದ್ದಾರೆ. ಹೈರ್ ಪರ್ಚೇಸ್ ಸಿಸ್ಟಮ್ ಮೇಲೆ ಹಣ ತಗೆದುಕೊಂಡು ಪರ್ಚೇಸ್ ಮಾಡಿದ್ದಾರೆ. ಅದು ಅಧ್ಯಕ್ಷರಿಗೆ ಗೊತ್ತಿದೆ. 15 ಸಾವಿರ ರೂಪಾಯಿ ಇನ್‌ವೆಸ್ಟ್ ಮಾಡಿದರೆ ಮಿಕ್ಕದ್ದು ಬ್ಯಾಂಕ್‌ನವರು ಕೊಡುತ್ತಾರೆ. ಈ ಬ್ಯಾಂಕ್‌ಗೆ 2-3 ಕಂತು ಕೊಡದೆ ಇದ್ದರೆ ಆ ವೆಹಿಕಲ್‌ನ್ನು ಸೀಜ್ ಮಾಡಿಕೊಂಡು ಹೋಗುತ್ತಾರೆ. Majority of vehicles are on hire purchase system. ಆದುದರಿಂದ ನೀವು ಟ್ಯಾಕ್ಸ್ ಜಾಸ್ತಿ ಮಾಡುವುದರಿಂದ ಏನು ಕಷ್ಟವಾಗುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕು. ಸಣ್ಣ ಪುಟ್ಟ ಬಂಡವಾಳ ಇರುವವರು ಲಾರಿ ಇಟ್ಟುಕೊಂಡು ಬಿಸಿನೆಸ್ ಮಾಡುತ್ತಾ ಇದ್ದರೆ ನೀವು ಟ್ಯಾಕ್ಸ್ ಜಾಸ್ತಿ ಮಾಡಿದರೆ ಏನೂ ಮಾಡುವುದಕ್ಕಾಗುವುದಿಲ್ಲ. ಅವನು ಬ್ಯಾಂಕರ್ ಹತ್ತಿರ ತೆಗೆದುಕೊಂಡುಹೋಗಿ ಅಷ್ಟೋ ಇಷ್ಟೋ ಕೊಟ್ಟು ಬಿಡಿ, ನನ್ನ ಕೈಯಲ್ಲಿ ಆಗುವುದಿಲ್ಲ ಎಂದು ಹೇಳಿ, ತನಗೆ ಇದ್ದ ಅಲ್ಪ ಸ್ವಲ್ಪ ಜಮೀನು ಗೇಣಿಗೆ ಕೊಟ್ಟು ಬಿಟ್ಟು ಅವನು ಏನಾಗುತ್ತಾನೆ ಗೊತ್ತೇ? ಅವನು ಪುರಂದರದಾಸನಾಗುತ್ತಾನೆ. ಇದನ್ನು ಅರ್ಥ ಮಾಡಿಕೊಳ್ಳಬೇಕು. ಮದ್ರಾಸ್‌ನಲ್ಲಿ ಇದ್ದಹಾಗೆ ಮಾಡಿದ್ದೀರಿ ಎಂದು ಹೇಳುತ್ತೀರಿ. ಮದ್ರಾಸಿನಲ್ಲಿ ಏನು ಸ್ಪ್ರಿಂಕ್ಲರ್ ಇದೆ, ಅದರ ಪಕ್ಕದ ದೇಶವಾದ ಕೇರಳದಲ್ಲಿ ಏನು ಇದೆ ಎನ್ನುವುದನ್ನು ಹೇಳಲಲ್ಲ. ಕೇರಳದಲ್ಲಿ, ಆಂಧ್ರದಲ್ಲಿ ಏನು ಮಾಡಿದ್ದಾರೆ ಎಂದು ಹೇಳಿದರೆ, ನಾವು ಕೇರಳ, ಆಂಧ್ರ, ಮದ್ರಾಸ್‌ನಲ್ಲಿ ಏನಾಗಿದೆ ಎನ್ನುವುದನ್ನು ಅರ್ಥಮಾಡಿಕೊಳ್ಳಬಹುದು. ಈಗ ಗುಡ್ಸ್ ಟ್ರಾನ್ಸ್‌ಪೋರ್ಟ್ ಉತ್ತರ ಪ್ರದೇಶದಿಂದ ಕೇರಳದವರೆಗೆ ಮತ್ತು ಮೈಸೂರಿನವರೆಗೆ ಇದೆ. ಅಲ್ಲಿ ಲೇಲ್ಯಾಂಡ್ ವೆಹಿಕಲ್ಸ್, ಬೆನ್ಸ್, ಕಾರ್ಸೊ ಇವೆ. ತಾವು ಎಷ್ಟರಮಟ್ಟಿಗೆ ಟ್ಯಾಕ್ಸ್ ಹಾಕಿದ್ದೀರಿ. ಅವರು ಗೂಡ್ಸ್ ಟ್ರಾನ್ಸ್‌ಪೋರ್ಟ್ ಡೆವಲಪ್ ಮಾಡುವುದಕ್ಕೋಸ್ಕರ ಜನರಿಗೆ ಬೇಕಾದ ಆಹಾರಪದಾರ್ಥಗಳನ್ನು ಸಾಗಿಸುವುದಕ್ಕೋಸ್ಕರ ಟ್ಯಾಕ್ಸ್ ಸ್ಟ್ರಕ್ಚರ್ ಅವರು ಎಷ್ಟರಮಟ್ಟಿಗೆ ಇಟ್ಟುಕೊಂಡಿದ್ದಾರೆ ಎನ್ನುವುದನ್ನು ನೋಡಿ. ಈ ಒಂದು ಏರಿಯ ಪರ್ಚೆಂಟ್ ಇದ್ದರೆ ಅದನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯ. ಮದ್ರಾಸ್‌ನಲ್ಲಿ ಮಾಡಿದ್ದಾರೆ ಎಂದರೆ ಮದ್ರಾಸ್‌ನಲ್ಲಿ ಏನೇನು ಮಾಡಿದ್ದಾರೋ ನಮಗೆ ಗೊತ್ತಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಬೊಂಬಾಯಿನಲ್ಲಿ ಇದ್ದಹಾಗೆ ಹಾಕೋಣವೇ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅದಕ್ಕೆ ತಮಗೇ ಹೇಳುತ್ತೇನೆ. ಪಿ. ಡಬ್ಲ್ಯ್ಯೂ. ಡಿ. ಮಿನಿಸ್ಟರ್ ರೋಡ್ ಕಾಂಗ್ರೆಸ್ಸಿಗೆ ಹೋಗುತ್ತಾರೆ. ಅವರು ವೆಹಿಕಲ್ಸ್ ಸರ್ವೆ ಮಾಡಿಸಿದ್ದಾರೆಯೇ? ನ್ಯಾಷನಲ್ ಹೈವೇಸ್, ಸ್ಟೇಟ್ ಫಂಡ್ ರೋಡ್ಸ್ ಮತ್ತು ಟಿ.ಡಿ.ಬಿ. ಫಂಡ್ಸ್ ರೋಡ್‌ಗಳಲ್ಲಿ ಎಷ್ಟೆಷ್ಟು ವೆಹಿಕಲ್ಸ್ ಓಡಾಡುತ್ತವೆ ಎನ್ನುವುದನ್ನು ಸರ್ವೆ ಮಾಡಿಸಿದ್ದಾರೆಯೇ? ಇದನ್ನು ಯಾತಕ್ಕೆ ಹೇಳುತ್ತಿದ್ದೇನೆ ಎಂದರೆ, ಏನೇನು ಷೇರನ್ನು ಯಾವ ಯಾವ ರಸ್ತೆಗಳಿಗೆ ಕೊಡಬೇಕು, ಎಷ್ಟು ಮೈಲಿ ರಸ್ತೆಗಳು ಎಲ್ಲೆಲ್ಲಿ ಡ್ಯಾಮೇಜ್ ಆಗಿವೆ, ಟ್ಯಾಕ್ಸ್ ಎಷ್ಟು ಹಾಕಬಹುದು ಎನ್ನುವುದನ್ನು ನೋಡಿ ಗುಡ್ಸ್ ವೆಹಿಕಲ್ಸ್ ಮೇಲೆ ಟ್ಯಾಕ್ಸ್ ಜಾಸ್ತಿ ಮಾಡಿ. ಈಗ ನಾನೂರು ರೂಪಾಯಿಗಳು ಇರುವುದನ್ನು 500 ರೂಪಾಯಿಗಳಿಗೆ ಏರಿಸಿದ್ದೀರಿ, 650 ರೂಪಾಯಿ ಇರುವುದನ್ನು 970 ರೂಪಾಯಿ ಮಾಡಿದ್ದೀರಿ ಇದರಿಂದ ಬಹಳ ತೊಂದರೆಯಾಗುತ್ತದೆ. ಆದುದರಿಂದ ನಾನು ಈ ಸಮಯದಲ್ಲಿ ಬಹಳ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನೀವು ಪ್ಯಾಸೆಂಜರ್ ವೆಹಿಕಲ್ಸ್ ಹೇಗೆ ನ್ಯಾಷನಲೈಸ್ ಮಾಡಿದ್ದೀರೋ, ಹಾಗೆಯೇ ಎಲ್ಲ ರೋಡ್ ಟ್ರಾನ್ಸ್‌ಪೋರ್ಟನ್ನೂ ನ್ಯಾಷನಲೈಸ್ ಮಾಡಿ ಇಲ್ಲದೇ ಹೋದರೆ ಆಹಾರ ಪದಾರ್ಥಗಳ ಬೆಲೆ ಏರಿ ಹೋಗುತ್ತದೆ. ನೀವು ಜನರ ಮನೆಯ ಬಾಗಿಲಲ್ಲಿ ಸಾಮಾನ್ಯ ಬಳಕೆಯ ಸಾಮಾನುಗಳು ಸುಲಭವಾಗಿ ದೊರಕುವಂತೆ ಮಾಡಬೇಕು. ಈಗ ಒಂದು ಮೂಟೆ ಕಡಲೆಕಾಯಿ 32 ಮೈಲಿ ಬರಬೇಕಾದರೆ ಒಂದು ಮೈಲಿಗೆ ಏರುಕಾಲು ರೂಪಾಯಿ ನಂತೆ ಸಿರಾದಿಂದ ತುಮಕೂರಿಗೆ ಫಾರ್ಜು ಮಾಡುತ್ತಾರೆ. ಟ್ಯಾಕ್ಸ್ ಹೆಚ್ಚು ಮಾಡಿದಮೇಲೆ ಮೈಲಿಗೆ ಮೂರೂಕಾಲು ರೂಪಾಯಿ ಮಾಡುತ್ತಾರೆ. ನಿನ್ನೆ ದಿನವೇ ಪೆಟ್ರೋಲ್ ಮೇಲೆ ಸೇಲ್ಸ್‌ಟ್ಯಾಕ್ಸ್

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಹೆಚ್ಚು ಮಾಡಿದ್ದೀರಿ, ಮೋಟಾರ್ ಅಕ್ಸಸರೀಸ್ ಮೇಲೆ ಟ್ಯಾಕ್ಸ್ ಹೆಚ್ಚು ಮಾಡಬಹುದು. ಆಗ ಈ ಉದ್ಧಿಮೆ ಏನಾಗುತ್ತದೆ ಎನ್ನುವುದನ್ನು ಸ್ವಲ್ಪ ಅರ್ಥಮಾಡಿಕೊಳ್ಳಬೇಕು. ಉದ್ಧಿಮೆಗಾರರು ಯಾರೂ ಉಳಿಯುವುದಕ್ಕೆ ಸಾಧ್ಯವಿಲ್ಲ. ನರಸಿಂಹರಾಜ ರೋಡ್, ಭಾರತ್ ಟಾಕೀಸ್ ಪಕ್ಕದಲ್ಲಿ ಹೋಗಿನೋಡಿದರೆ ಅರ್ಥವಾಗುತ್ತದೆ. ನೂರಾರು ವೆಹಿಕಲ್ಸ್ ಮುರಿದು ವರ್ಕ್‌ಷಾಪ್ ಮುಂದೆ ನಿಂತಿವೆ. ಅವಕ್ಕೆ ಬೇಕಾದ ಸಾಮಾನು ಸಿಕ್ಕುವುದಿಲ್ಲ, ಟೈರುಗಳು ಸಿಕ್ಕುವುದಿಲ್ಲ ಟೈರ್ಸ್ ರೇಷನ್ ಆಗಿದೆ. 450 ಟೈರ್ ಕೇಳಿದರೆ 200 ಕೊಡುತ್ತಾರೆ. ಲಾಭ ಬರದೆ 75,000 ರೂಪಾಯಿಗಳನ್ನು ವೆಹಿಕಲ್ಸ್‌ಗೆ ಹೇಗೆ ಕೊಡುತ್ತಾರೆ ಎಂದು ಅಧ್ಯಕ್ಷರು ಅಪ್ಪಣೆ ಕೊಡಿಸಿದರು. ಬ್ಲಾಕ್ ಮಾರ್ಕೆಟ್‌ನಲ್ಲಿ ಸಾಲ ತಂದು ನಡೆಸಬೇ ಹೋದರೆ ಕೆಲಸ ಗಾರರನ್ನು ಮೆಂಟೇನ್ ಮಾಡುವುದಕ್ಕೆ ಸಾಧ್ಯವಿಲ್ಲ ಇದನ್ನು ತಾವು ಯೋಚನೆ ಮಾಡಿ. ನಾಲ್ಕನೆಯ ಪಂಚವಾರ್ಷಿಕ ಯೋಜನೆಯನ್ನು ತುರ್ತು ಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರದವರು ಡಿಫೆನ್ಸ್ ಓರಿಯಂಟೆಡ್ ಮಾಡಬೇಕು ಎಂದು ಪ್ರಯತ್ನ ಮಾಡುತ್ತಾ ಇರುವಾಗ, ಮೈಸೂರು ಸರ್ಕಾರದವರು ಯಾವ ಲೈನಿನಲ್ಲಿ ಯೋಚನೆ ಮಾಡುತ್ತಾ ಇದ್ದಾರೋ ಗೊತ್ತಿಲ್ಲ. ನಾಲ್ಕನೇ ಪ್ಲಾನಿನ ಮೊದಲನೇ ವರ್ಷ ಹೇಗೆ ಎನ್ನುವುದು ತಿಳಿಯದು. ಆದ್ದರಿಂದ ಗುಡ್ಸ್ ಟ್ರಾನ್ಸ್‌ಪೋರ್ಟಿಗೆ ಯಾರು ಕೈ ಹಾಕಿದ್ದಾರೆ, ಯಾರು ಬಂಡವಾಳ ಹಾಕಿದ್ದಾರೆ, ಆ ಬಂಡವಾಳ ಹುಟ್ಟುವುದಕ್ಕೆ ಕಷ್ಟವಾಗುತ್ತದೆ ಎನ್ನುವುದನ್ನು ತಿಳಿದುಕೊಂಡು ಟ್ಯಾಕ್ಸ್ ಹೆಚ್ಚಿಸುವುದನ್ನು ಯೋಚನೆ ಮಾಡಬೇಕು. ಇನ್ನು ನಾಲ್ಕನೇ ಪ್ಲಾನಿನ ಮೊದಲನೆಯ ವರ್ಷ ಇನ್ನೂ ಪ್ರಾರಂಭವಾಗಲಿದೆ. ಮುಂದಿನ ಬಡ್ಜೆಟ್ ಸೆಷನ್ನಿನಲ್ಲಿ, ಈ ಉದ್ಧಿಮೆಗಾರರ ಕಷ್ಟವನ್ನು ತಿಳಿದುಕೊಂಡು, ನಮ್ಮ ಅಕ್ಕಪಕ್ಕದ ಪ್ರಾಂತ್ಯಗಳಲ್ಲಿ ಎನು ಇದೆ ಎಂದು ತಿಳಿದು, ಗುಡ್ಸ್ ಟ್ರಾನ್ಸ್‌ಪೋರ್ಟ್ ಬಂಡವಾಳ ಹುಟ್ಟುವುದಕ್ಕೆ ಅವಕಾಶ ಕಲ್ಪನೆ ಮಾಡಿಕೊಡಬೇಕೆಂದು ಸಂಬಂಧಪಟ್ಟ ಮಂತ್ರಿಗಳಿಗೆ ವಿನಯದಿಂದ ಅರಿಕೆ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎ. ಎಂ. ದೇವ್.—ಇದು ಸೆಲ್ಫ್-ಡಿಫೀಟಿಂಗ್ ಬಿಲ್ ಆಗುತ್ತದೆ. ಹಣವೇನೂ ಸಿಕ್ಕುವುದಿಲ್ಲ. ಇದರಿಂದ ಮಾಲ್ಯ ಕಡಮೆಯಾಗಿ ಏಕಾನಮಿ ಹಾಳಾಗುವುದು ಖಂಡಿತ. ಈ ರೀತಿಯಾಗಿ ಬಲ್ಲು ಬರುವುದು ಏನು ತೋರಿಸುತ್ತದೆಂಬುದನ್ನು ಯೋಚನೆ ಮಾಡಬೇಕು. ನಿಮ್ಮ ಧ್ಯೇಯದಲ್ಲಿ, ನೀತಿಯಲ್ಲಿ ನಂಬಿಕೆ ಇಲ್ಲದೆ ನಿಮ್ಮ ಪಕ್ಷ ಮುಂದುವರೆಯುತ್ತಿದೆಯೆಂದು ಕಾಣುತ್ತದೆ. ಶ್ರೀ ಮುಕ್ಕಣ್ಣಪ್ಪನವರು ಹೇಳಿರುವುದರಲ್ಲಿ ಸ್ವಲ್ಪ ಅರ್ಥವಿದೆಯೆಂದು ಕಾಣುತ್ತದೆ. ಅವರು ಹೇಳಿದಹಾಗೆ ನೀವು ಕಾರ್ಗೊ ಕ್ಯಾರೀಯಿಂಗ್ ಗಾಡಿಗಳನ್ನು ರಾಷ್ಟ್ರೀಕರಣವಾದರೂ ಮಾಡಿ ಅಥವಾ ಕಂಪೀಟ್ ಮಾಡಿ ನೋಡಿ. ನಿಜವಾಗಿಯೂ ಸಂಪತ್ತನ್ನು ಗಳಿಸಬೇಕಾದರೆ ಇನ್‌ಫ್ಲೇಷನ್ ತಡೆಗಟ್ಟಬೇಕು. ಇಷ್ಟು ಹೇಳಿ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸುತ್ತೇನೆ.

† ಶ್ರೀ ಕೆ. ಎಸ್. ಸೂರ್ಯನಾರಾಯಣ ರಾವ್.—ಈ ವಿಧೇಯಕವನ್ನು ವಿರೋಧಿಸಬೇಕಾದ್ದು ಅವಶ್ಯಕವಾಗಿದೆ. ಕಾರಣ ಇಷ್ಟೆ: ನಾಲ್ಕನೆಯ ಪಂಚವಾರ್ಷಿಕ ಯೋಜನೆಗೆ ಈ ಹಣ ಬೇಕೆಂದು ಈ ವಿಧೇಯಕದ ಉದ್ದೇಶಗಳು ಮತ್ತು ಕಾರಣಗಳ ವಿವರದಲ್ಲಿ ಹೇಳಿದ್ದಾರೆ. ಇದು ತಕ್ಷಣ ಬರತಕ್ಕ ಆದಾಯ. ಯಾವುದಾದರೂ ಇರಿಗೇಷನ್ ಕೆಲಸ ಅಥವಾ ಬೇರೆ ಕೆಲಸವಾದರೆ 4-5 ವರ್ಷಗಳಾದ ಮೇಲೆ ಆದಾಯ ಬರುವುದು. ಆದರಿಂದ ಈ ದಿವನ ಪ್ಲಾನ್ ಮಾಡುವುದಕ್ಕೆ ಹಣ ಬರುವುದಿಲ್ಲ. ಈ ದಿವನ ಬರುವ ಆದಾಯವನ್ನು ನಾಲ್ಕನೆಯ ಪಂಚವಾರ್ಷಿಕ ಯೋಜನೆಗೆ ಕೊಡುತ್ತೇವೆಂದು ಹೇಳುವುದನ್ನು ನಂಬುವುದಕ್ಕಾಗುವುದಿಲ್ಲ. ಈಗ ವಸೂಲುಮಾಡಿ ಮುಂದೆ ಖರ್ಚುಮಾಡುತ್ತೇವೆಂದು ಹೇಳುತ್ತಾರೆ. ಈಗಾಗಲೇ ways and means position weak ಆಗಿದೆ ಎಂದು ಹೇಳುತ್ತಿದ್ದಾರೆ. ಇದರಿಂದ ಒಂದಕ್ಕೆ ಮೂರರಷ್ಟು ಹೆಚ್ಚುತ್ತದೆ, ಅದರಲ್ಲಿ ಅರ್ಧಭಾಗ ಎಂದು ಹೇಳುವಾಗ ಷೆಡ್ಯೂಲು 'ಎ'ನ್ನಲ್ಲಿ ಮೂರರಷ್ಟು ಹೆಚ್ಚಿಸಿಲ್ಲ. 'ಬಿ' ಷೆಡ್ಯೂಲಿನಲ್ಲಿ ಮೂರರಷ್ಟು ಹೆಚ್ಚಿಸಿದ್ದಾರೆ. ಉದಾಹರಣೆಗೆ 'ಬಿ' ಷೆಡ್ಯೂಲಿನಲ್ಲಿ 5 (i) (c) ಐಟಂನಲ್ಲಿ 31 ಮತ್ತು 94 ಇರುವುದು ರೂ 34 ಮತ್ತು 101 ಆಗುತ್ತದೆ. ಷೆಡ್ಯೂಲು 'ಬಿ'ನಲ್ಲಿ ಕೊನೆಯ ಐಟಂ 240 ರೂಪಾಯಿ ಇತ್ತು, ಅದಕ್ಕೆ 30 ರೂಪಾಯಿ ಜಾಸ್ತಿಯಾಗಿ 270 ರೂಪಾಯಿ ಆಗುತ್ತದೆ. ಆದುದರಿಂದ 23 ಲಕ್ಷ ರೂಪಾಯಿ ಬರುತ್ತದೆ ಎಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಎರಡನೆಯದಾಗಿ ನಾಲ್ಕನೆಯ ಯೋಜನೆಗೆ ಈ ದಿವನ ಹಣ ಬೇಕಾಗಿಲ್ಲ. ಈ ದಿವನ ಇದನ್ನು ಹಾಕಿ ನಾಳೆ ಜಾರಿಗೆ ಕೊಟ್ಟರೆ ಮುಂದಿನ ಕ್ವಾರ್ಟರಿಗೆ ಹಣ ಬರುತ್ತದೆ.

ಅಧ್ಯಕ್ಷರು.—ಇದು ಇಲ್ಲಿ ಅಂಗೀಕಾರವಾಗಿ ನಂತರ ಮೇಲ್ಮನೆಯಲ್ಲಿ ಅಂಗೀಕಾರವಾಗಬೇಕು, ನಂತರ ಜಾರಿಗೆ ಬರಬೇಕು.

ಶ್ರೀ ಕೆ. ಎಸ್. ಸೂರ್ಯನಾರಾಯಣ ರಾವ್.—ಜನವರಿ 66 ರಿಂದಲಾದರೂ ಜಾರಿಗೆ ಬರುತ್ತದೆ. ಎರಡನೆಯದಾಗಿ ಮದ್ರಾಸಿನಲ್ಲಿದೆ.....

Mr. SPEAKER.—We are in October. By the mite the Bill is passed by this House and the other House and assent obtained,—all this takes time.

Sri D. DEVARAJ URS.—May I tell the Hon'ble Member that the IV Five-Year Plan begins in the year 1966-67.

Mr. SPEAKER.—Is the Minister making any mistake ?

Sri K. S. SURYANARAYANA RAO.-Sir, the Hon'ble Finance Minister yesterday told us that they have no plan prepared for the Fourth Plan. They have not even conceived—let alone implementing it. Today another Minister says it is part of the Fourth Plan. ದೇಶದ ಹೊರಗಿರುವವರಿಗೆ ಹಾಕುವುದರಲ್ಲಿ ಅರ್ಥವಿದೆ, ನಮ್ಮ ದೇಶದಲ್ಲೇ ಇರುವವರಿಗೆ ಹೆಚ್ಚಾಗಿ ಹಾಕುವುದರಲ್ಲಿ ಅರ್ಥವಿಲ್ಲ.

Inster-State routes and Inter-State permits—that is the category of persons covered by part B. So far as the other vehicles are concerned, the rates are lower in Mysore. Therefore the volume of trade in the State will be much more than in the other States. Or possibly, there will be an attraction of the trade from the Border. If you balance this, you are balancing everything. Therefore except your getting by way of taxes, indirect benefits that are likely to flow from the variation in taxes from outside to State is lost so far as Mysore is concerned.

ಎರಡನೆಯದಾಗಿ ಈ ತೆರಿಗೆ ವಿಪರೀತವಾಗಿ ಹೆಚ್ಚಿನುವುದರಿಂದೇನಾಗುತ್ತದೆ ಎಂಬುದನ್ನು ನೋಡಬೇಕು. ಅಖಿಲ ಭಾರತ ನಮ್ಮೇಳನದಲ್ಲಿ ತೆರಿಗೆ ಕಡಮೆಮಾಡಬೇಕು. ಅನುಕೂಲ ಜಾಸ್ತಿ ಮಾಡಬೇಕು ಎಂದು ನಮ್ಮ ಪ್ರತಿನಿಧಿಗಳು ಒಪ್ಪಿ ಇಲ್ಲಿ ಹೆಚ್ಚಿಸೋಣ ಎಂದು ಹೇಳಿದರೆ ಅದರಲ್ಲಿ ಅರ್ಥವೇನು ? ಪ್ಲಾನ್ ವಿಚಾರ ಹೇಳುವುದಾದರೆ ಈ ದಿವನ ಮೇಜರ್ ಇರಿಗೇಷನ್ ಕೆಲಸ ಈ ವರ್ಷ ತೆಗೆದುಕೊಳ್ಳಬಾರದು ಎಂಬುದಾಗಿ ಸ್ಟೇಟ್‌ಮೆಂಟ್ ಬಂದಿದೆ. ನಮ್ಮ ಪ್ಲಾನು ಕೂಡ ಅಷ್ಟರ ಮಟ್ಟಿಗೆ ಕಡಮೆಯಾಗುತ್ತದೆ.

We are going on as if we are in the normal period of the Third Plan.

ಹೀಗೆ ಆಗಿರುವುದರಿಂದ ಇವತ್ತು ತುರ್ತು ಪರಿಸ್ಥಿತಿ ಎನ್ನುವ ದೃಷ್ಟಿಯಿಂದ ತೆರಿಗೆಗಳನ್ನು ಹೆಚ್ಚು ಮಾಡುತ್ತಿದ್ದೇವೆ ಎಂದು ಅವರು ಹೇಳಿದರೂ ಕೂಡ ತುರ್ತು ಪರಿಸ್ಥಿತಿಗೋಸ್ಕರ ಇದನ್ನು ಮಾಡುತ್ತಿಲ್ಲ ಎಂದು ಹೇಳಬಹುದು.

ತೆರಿಗೆಯ ದರವನ್ನು ಕಡಮೆ ಮಾಡಿದಷ್ಟೂ ವಾಹನಗಳು ಹೆಚ್ಚಾಗಿ, ವಾಲ್ಯೂಂ ಆಫ್ ಟ್ರಾಫಿಕ್ ಜಾಸ್ತಿಯಾಗುತ್ತದೆ. ಆಗ from the place of supply to place of demand ಸಂಚಾರ ಹೆಚ್ಚಾಗುತ್ತದೆ. ಆಗ ಕೊಳ್ಳುವವನಿಗೂ ಸರಿಯಾದ ಬೆಲೆ ಸಿಕ್ಕುತ್ತದೆ ಮತ್ತು ತಿನ್ನುವವನಿಗೂ ಸರಿಯಾದ ಬೆಲೆಗೆ ಪದಾರ್ಥಗಳು ಸಿಕ್ಕುತ್ತವೆ. ಆದರೆ ಸರ್ಕಾರದವರು ದರಗಳನ್ನು ಹೆಚ್ಚು ಮಾಡುತ್ತಿರುವುದರಿಂದ ಅದರ ಪರಿಣಾಮ ಏನಾಗುತ್ತದೆ ಎಂದರೆ ರಸ್ತೆಯಲ್ಲಿ ಸಂಚಾರ ಮಾಡುವ ವಾಹನಗಳ ಸಂಖ್ಯೆ ಕಡಮೆಯಾಗುತ್ತದೆ. ಹೀಗೆ ವಾಹನಗಳ ಸಂಚಾರ ಕಡಮೆ ಆದರೆ ಅದ್ದರಿಂದ ಧಾರಣೆ ಹೆಚ್ಚಾಗುವುದರ ಜೊತೆಗೆ from the place of supply to the place of demand ವಾಹನಗಳ ಸಂಚಾರ ಕಡಮೆಯಾಗಿ ಬೆಳೆದವನಿಗೂ ಸರಿಯಾದ ಬೆಲೆ ಸಿಕ್ಕುವುದಿಲ್ಲ. ಯಾವ ಊರಿನಲ್ಲಿ ಸಾಮಾನು ಸಿಕ್ಕುತ್ತದೆಯೋ ಅಲ್ಲಿಂದ ಇನ್ನೊಂದು ಕಡೆಗೆ, ಕಡಮೆ ಇರುವ ಕಡೆಗೆ ಸಾಗಿಸುವುದಕ್ಕೂ ಅವಕಾಶವಾಗುವುದಿಲ್ಲ. ಆದುದರಿಂದ ಸರಬರಾಜು ಮತ್ತು ಬಳಕೆ ಈ ಎರಡು ದೃಷ್ಟಿಕೋನಗಳಿಂದ ನೋಡಿದರೂ ಸಹ ಬೆಲೆಯ ಮಟ್ಟವನ್ನು ಸ್ಥಿಮಿತದಲ್ಲಿಡುವುದಕ್ಕಾಗುವುದಿಲ್ಲ. ಈ ಎಲ್ಲ ದೃಷ್ಟಿಗಳಿಂದ ನೋಡಿದರೂ ಕೂಡ ಸಾಮಾನು ಸಾಗಿಸುವ ವಾಹನಗಳ ಮೇಲೆ ಹೆಚ್ಚು ತೆರಿಗೆಯನ್ನು ಹಾಕುವುದರಲ್ಲಿ ಅರ್ಥವಿಲ್ಲ ಎಂದು ನನ್ನ ಅಭಿಪ್ರಾಯ.

(SRI K. S. SURYANARAYANA RAO)

ಈ ಮಸೂದೆಯಲ್ಲಿ ಕೊಟ್ಟಿರುವ ಪೆಡ್ಯೂಲನ್ನು ನೋಡಿದರೆ, ಟ್ರೈಲರ್‌ಗೆ ಕಡಮೆ ತೆರಿಗೆಯನ್ನು ಹಾಕಿದ್ದಾರೆ. ಒಂದು ವೇಳೆ ವಾಹನ ಮೂರು ಟನ್‌ಗಳ ಭಾರ ಹೊರುವುದಾಗಿದ್ದು ಟ್ರೈಲರ್ ಸಹ ಮೂರು ಟನ್ ಭಾರವನ್ನು ಹೊರುವುದಾಗಿದ್ದರೆ ಟ್ರೈಲರ್‌ಗೆ ಕಡಮೆ ತೆರಿಗೆಯನ್ನು ಹಾಕಿ ಇನ್ನೊಂದು ವಾಹನಕ್ಕೆ ಹೆಚ್ಚಿಸುವುದರಲ್ಲಿ ಅರ್ಥವಿಲ್ಲ. ಎರಡೂ ಒಂದೇ ಭಾರವನ್ನು ಹೊರುವುದರಿಂದ ಎರಡಕ್ಕೂ ಏಕರೂಪವಾದ ತೆರಿಗೆಯನ್ನು ಹಾಕಬೇಕು. ಅಲ್ಲದೆ ಟ್ರೈಲರ್, ಉಪಯೋಗಿಸುವುದರಲ್ಲಿ ಇನ್ನೂ ಒಂದು ಅನುಕೂಲವಿದೆ. ಟ್ರೈಲರ್‌ಗಾಗಿ ಹೆಚ್ಚು ಫ್ಯೂಯಲ್ ಖರ್ಚಿಲ್ಲದೆ ಮೂರು ನಾಲ್ಕು ಟನ್ ಸಾಮಾನುಗಳನ್ನು ಸಾಗಾಣಿಕೆ ಮಾಡುವುದಕ್ಕೆ ಬರುತ್ತದೆ. ಒಂದೇ ವಾಹನದಲ್ಲಿ ಸಾಮಾನು ಸಾಗಾಣಿಕೆ ಮಾಡುವಾಗ ಒಂದು ಲೀಟರ್‌ಗೆ ಹತ್ತು ಮೈಲಿ ಬರುವುದಾದರೆ ಅದಕ್ಕೆ ಒಂದು ಟ್ರೈಲರನ್ನು ಜೋಡಿಸುವುದರಿಂದ ಒಂದು ಲೀಟರ್‌ಗೆ ಎಂಟು ಮೈಲಿ ಬರಬಹುದು. ಇದರಿಂದ ಖರ್ಚು ಕಡಮೆಯಾಗುತ್ತದೆ, ಸ್ಪೇರ್ ಪಾರ್ಟ್‌ಗಳಿಗೆ ಹೆಚ್ಚು ಖರ್ಚು ಮಾಡಬೇಕಾಗುವುದಿಲ್ಲ. ಮತ್ತು ಹೊಸ ಟಾಸಿ ತರಬೇಕಾದರೆ 60-70 ಸಾವಿರ ರೂಪಾಯಿ ಬೇಕಾಗುವ ಕಡೆ ಒಂದು ಟ್ರೈಲರನ್ನು ಜೋಡಿಸಿ ಕೊಂಡರೆ ಬಹಳ ಕಡಮೆ ಬೆಲೆಯಲ್ಲಿ ಮಾಡಿಕೊಳ್ಳಬಹುದು. ಅದುದರಿಂದ ಟ್ರೈಲರ್‌ಗಳಿಗೆ ವಾಹನಗಳಿಗೆ ಹಾಕುವಷ್ಟೇ ತೆರಿಗೆಯನ್ನು ಹಾಕಬೇಕು. ಇದು ಸರಿಯಾಗಿ ಕಾಣುತ್ತದೆ. ಸರ್ಕಾರ ಇದರ ಬಗ್ಗೆ ಯೋಚಿಸಿ ವೆಹಿಕರ್ ಮತ್ತು ಟ್ರೈಲರ್ ಇವೆರಡಕ್ಕೂ ಏಕರೂಪವಾದ ತೆರಿಗೆಯನ್ನು ಹಾಕ ಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಡಿ. ಮುನಿಚಿನ್ನಪ್ಪ (ಬೆಂಗಳೂರು ದಕ್ಷಿಣ).—ಸ್ವಾಮಿ, ಈಗ ಮಾನ್ಯ ಸಭೆಯಲ್ಲಿ ಚರ್ಚೆಯಾಗುತ್ತಿರುವ ಮೋಟಾರು ವಾಹನಗಳ ತೆರಿಗೆಗೆ ಸಂಬಂಧಪಟ್ಟ ಮಸೂದೆಯ ವಿಚಾರದಲ್ಲಿ ನಮ್ಮ ಸ್ನೇಹಿತರುರಚನಾತ್ಮಕವಾದ ಸಲಹೆಗಳನ್ನು ಕೊಟ್ಟಿರುತ್ತಾರೆ. ನಾನು ನನ್ನ ಅಭಿಪ್ರಾಯಗಳನ್ನು ಮಾತ್ರ ತಮ್ಮ ಮುಂದೆ ಇಡಬೇಕೆಂದು ಇಷ್ಟಪಡುತ್ತೇನೆ.

ಈಗಾಗಲೇ ರಾರಿಗಳನ್ನು ಇಟ್ಟಿರುವುದರ ಅನುಭವ ಜೆನ್ನಾಗಿ ಆಗಿದೆ. ಇದರ ಅನುಭವವಿಲ್ಲದೆ ಇರುವವರು ಈ ರೀತಿಯ ಮಸೂದೆಗಳನ್ನು ತರುತ್ತಿರುವುದರಿಂದ ಜನಗಳಿಗೆ ಬಹಳ ಕಷ್ಟವಾಗಿದೆ. ಮೂರು ತಿಂಗಳಿಗೆ ನುಮಾರು 400 ರೂಪಾಯಿ ತೆರಿಗೆ ಕೊಡುತ್ತಿದ್ದವರು ಇದರ ಪ್ರಕಾರ 600 ರೂಪಾಯಿ ಕೊಡಬೇಕಾಗುತ್ತದೆ, 500 ರೂಪಾಯಿ ಕೊಡುತ್ತಿದ್ದವರು 750 ರೂಪಾಯಿ ಕೊಡ ಬೇಕಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್.—ಯಾವ ವಾಹನಕ್ಕೂ 200 ರೂಪಾಯಿ ಜಾಸ್ತಿ ಆಗಿಲ್ಲ. ಲೆಕ್ಕ ತಿಳಿಯದೆ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಲೆಕ್ಕ ಇರುವುದನ್ನು ನೋಡಿ ಸರಿಯಾಗಿ ಹೇಳಬೇಕು ಸ್ವಾಮಿ.

ಶ್ರೀ ಡಿ. ಮುನಿಚಿನ್ನಪ್ಪ.—8,500ರಿಂದ 9,500 ಕೆ.ಜಿ. ತೂಕದ ವಾಹನಗಳಿಗೆ 650ರೂಪಾಯಿ ತೆರಿಗೆಯನ್ನು ಕೊಡುತ್ತಿದ್ದರು. ಈಗ ಅದನ್ನು 975ರೂಪಾಯಿ ಮಾಡಬೇಕೆಂದು ತಂದಿದ್ದಾರೆ. ಇದರಿಂದ ಒಂದಕ್ಕೆ ಎರಡು ಆಯಿತೋ ಇಲ್ಲವೋ, ಸ್ವಾಮಿ?

ಮೂರು ತಿಂಗಳ ಅವಧಿಯೊಳಗಾಗಿ ತೆರಿಗೆಯನ್ನು ಕೊಡದೆ ಅದರ ಮರು ದಿನ ಕೊಟ್ಟರೂ ಕೂಡ ಅವನಿಂದ ಪೆನಾಲ್ಟಿ ವಸೂಲು ಮಾಡುತ್ತಾರೆ. ಮುಕ್ಕಾಲು ಭಾಗ ರಾರಿಗಳನ್ನು ಹೊಂದಿರು ವವರೆಲ್ಲರೂ ಬಡವರು. ಅವರು ಹೆಂಡತಿಯ ಮಾಂಗಲ್ಯವನ್ನಾದರೂ ಮಾರಿ ತೆರಿಗೆಯನ್ನು ಕೊಡ ಬೇಕು.

ಶ್ರೀ ಡಿ. ದೇವರಾಜ ಅರಸ್,—ಪೆಡ್ಯೂಲನ್ನು ನೋಡಿದರೆ ಮಾನ್ಯ ಸದಸ್ಯರಿಗೆ ಗೊತ್ತಾಗುತ್ತದೆ. ಪಾರ್ಟ್ ಏನಲ್ಲ 8,500 ಕೆ. ಜಿ. ಗಳಿಗೆ ಹೆಚ್ಚಾಗಿದ್ದು 9500 ಕೆ. ಜಿ. ಗಳಿಗೆ ಕಡಮೆ ಇದ್ದರ ಅಂಥ ವಾಹನಗಳಿಗೆ ಮೊದಲು 600 ರೂಪಾಯಿ ತೆರಿಗೆಯನ್ನು ಕೊಡಬೇಕಾಗಿತ್ತು. ಈಗ ಅದನ್ನು 650 ರೂಪಾಯಿ ಮಾಡಿದ್ದೇವೆ. ಅದರಿಂದ 50 ರೂಪಾಯಿ ಮಾತ್ರ ಜಾಸ್ತಿಯಾಗುತ್ತದೆ. ಅದೇ ರೀತಿ 10,500 ಕೆ. ಜಿ. ಗಳಿಗೆ ಮೇಲ್ಪಟ್ಟಿರುವ ವಾಹನಗಳಿಗೆ 80 ರೂಪಾಯಿ ಮಾತ್ರ ಜಾಸ್ತಿಯಾಗುತ್ತದೆ. ಏಕ್‌ದಂ 200 ರೂಪಾಯಿ ಎಲ್ಲೂ ಹೆಚ್ಚು ಮಾಡಿಲ್ಲ ಪಟ್ಟಿಯಲ್ಲಿ ಕೊಟ್ಟಿರುವ ದರಗಳು ಮೊದಲನೆಯ ಕಾಲಂನಲ್ಲಿರುವುದು ನ್ಯೂಮಾಟಿಕ್ ಟೈರ್ಸ್ ಎಂದರೆ ರಬ್ಬರ್ ಟೈರ್ ಹಾಕಿರುವುದಕ್ಕೆ ಅನ್ವಯಿಸುತ್ತದೆ. ಎರಡನೆಯ ಕಾಲಂನಲ್ಲಿರುವುದು ಇತರ ವಾಹನಗಳಿಗೆ ಅನ್ವಯಿಸುತ್ತದೆ.

ಶ್ರೀ ಡಿ. ಮುನಿಚಿನ್ನಪ್ಪ.—ಮೂರು ತಿಂಗಳಿಗೆ ಈಗ ಕೊಡುತ್ತಿರುವ ತೆರಿಗೆಯೇ ಜಾಸ್ತಿ. ಈ ಕಾಲದಲ್ಲಿ ಲಾರಿ ಇಟ್ಟುಕೊಂಡಿರುವವರು ಹನ್ನೆರಡಾಣೆ ಭಾಗ ಸಾಲಗಾರರಾಗಿ, ಅವರ ಲಾರಿಗಳೆಲ್ಲ ಷೇಟ್‌ಗಳ ಹೆಸರಿನಲ್ಲಿ ನಡೆಯುತ್ತಿವೆ. ಸ್ಪೇರ್ ಪಾರ್ಟ್ ತೆಗೆದುಕೊಳ್ಳಬೇಕಾದರೆ ಐದು ರೂಪಾಯಿ ಇದ್ದ ಸಾಮಾನು 50 ರೂಪಾಯಿ ಆಗಿದೆ. ಹೀಗೆ ಎಲ್ಲ ಸಾಮಾನುಗಳ ಬೆಲೆಗಳೂ ಜಾಸ್ತಿಯಾಗಿದೆ. ಈಗಿನ ಆಹಾರ ಪರಿಸ್ಥಿತಿಯಿಂದ ಧಾರಣ್ಣವಾಸಿಗಳೆಲ್ಲ ಹೆಚ್ಚುತ್ತಿರುವುದರಿಂದ ಜನಗಳಿಗೆ ಬಹಳ ತೊಂದರೆಯಾಗಿದೆ. ನಮ್ಮ ಸರ್ಕಾರಕ್ಕೂ ತೊಂದರೆ ಇದೆ. ಆದರೂ ಸರ್ಕಾರ ಈ ವಿಚಾರದಲ್ಲಿ ದೊಡ್ಡ ಮನಸ್ಸು ಮಾಡಿ ಸಾಧ್ಯವಾದಷ್ಟು ತೆರಿಗೆಯನ್ನು ಕಡಮೆ ಮಾಡಬೇಕೆಂದು ಹೇಳುತ್ತೇನೆ. ಜನರಿಗೆ ಇರುವ ಕಷ್ಟವನ್ನು ತಿಳಿದುಕೊಂಡಿದ್ದರೂ ಸಹ ಸರ್ಕಾರ ಈ ತೆರಿಗೆಯನ್ನು ಹೆಚ್ಚು ಮಾಡುವಂಥ ಮನೂವೆಗಳನ್ನು ತರುವುದು ಬಹಳ ಅನ್ಯಾಯ ಎಂದು ವಿನಂತಿ ಮಾಡಿಕೊಂಡು ನನ್ನ ಎರಡು ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅಧ್ಯಕ್ಷರೇ, ಪ್ರತಿ ಅಧಿವೇಶನದಲ್ಲಿಯೂ ಯಾವುದಾದರೂ ಒಂದು ತೆರಿಗೆ ಇಲ್ಲವೆ ಈ ಸಭೆ ಕರೆಯುವ ಅಭಿಪ್ರಾಯ ಇವರಿಗೆ ಇಲ್ಲವೆಂದು ತೋರುತ್ತದೆ. ಈ ರೀತಿ ತೆರಿಗೆಯನ್ನು ಹಾಕುತ್ತಿರುವುದರಿಂದ ಎಷ್ಟು ಕಷ್ಟವಾಗುತ್ತದೆಂಬುದನ್ನು ಶ್ರೀಮಾನ್ ಮುನಿಚಿನ್ನಪ್ಪನವರು ವರ್ಣನೆ ಮಾಡಿದ್ದಾರೆ. ನಾನು ಮಾತನಾಡಬಾರದೆಂದು ಇದ್ದೆ. ಆದರೆ ಅವರು ಪಡುತ್ತಿರುವ ಸಂಕಟ ನೋಡಿ ನಾನು ಈಗ ಮಾತನಾಡಬೇಕಾಗಿದೆ.

Mr. SPEAKER.—The Member must deal with only relevant points.

12-00 NOON

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ದೊಡ್ಡ ದೊಡ್ಡ ಕಂಪೆನಿಗಳ ಮಾಲೀಕರಿಗೆ ಸಲಾಮು ಮಾಡುವ ದೃಷ್ಟಿಯಿಂದ ಕೇವಲ ಒಂದೆರಡು ಲಾರಿಗಳನ್ನಿಟ್ಟಿರುವ ಮನುಷ್ಯನಿಗೆ ಬಹಳ ತೊಂದರೆಯಾಗಿದೆ. ಇವರು ಹಾಕತಕ್ಕ ತೆರಿಗೆ ಯಾರ ಮೇಲೆ ಬೀಳುತ್ತದೆಂಬುದನ್ನು ಈ ಸರ್ಕಾರದವರು ಯೋಚನೆ ಮಾಡುವುದಿಲ್ಲ. ಇವರು ಯಾವ ತೆರಿಗೆ ಹಾಕಿದರೂ ಮನುಷ್ಯನ ನಿತ್ಯ ಬಳಕೆ ವಸ್ತುಗಳ ಮೇಲೆ ಹಾಕಬಾರದೆಂಬ ಒಂದು ನಿಯಮವನ್ನು ಇವರು ಇಟ್ಟುಕೊಳ್ಳಬೇಕು. ಇವರು ಬಿಹಾಪುರದಿಂದ ಜೋಳವನ್ನು ತರಿಸುತ್ತಾರೆ, ಮಂಡ್ಯ ಕಂಪೆನಿಯಿಂದ ಸಕ್ಕರೆಯನ್ನು ತರಿಸುತ್ತಾರೆ, ತಿಪಟೂರಿನಿಂದ ತೆಂಗಿನಕಾಯಿಗಳನ್ನು ತರಿಸುತ್ತಾರೆ, ಇಪ್ಪೆಲ್ಲಾ ಮಾನ್ಯ ಸಚಿವರಿಗೆ ಚೆನ್ನಾಗಿ ಗೊತ್ತಿದೆ, ಲಾರಿಯಿಂದ ಬರತಕ್ಕ ಸಾಮಾನುಗಳ ಮೇಲೆ ಅದರಲ್ಲೂ ಸಾಮಾನ್ಯ ಬಳಕೆ ಪದಾರ್ಥಗಳ ಮೇಲೆ ತೆರಿಗೆಯನ್ನು ಮಾಲೀಕನಾದವನು ಹಾಕುತ್ತಾನೆ. ಅದು ಸಾಮಾನ್ಯ ಬಳಕೆದಾರರ ಮೇಲೆ ಬೀಳುತ್ತದೆ. ಆದರೆ ಸರ್ಕಾರ ತೆರಿಗೆಗಳನ್ನು ಹಾಕದೆಯೇ ಅಡಳಿತವನ್ನು ನಡೆಸುವುದು ಹೇಗೆ ಎಂದು ಕೇಳಬಹುದು. ಅನುಪಯುಕ್ತವಾದ ಯೋಜನೆಗಳನ್ನು ಮಾಡಿ ಸರ್ಕಾರದಲ್ಲಿ ಹಣವನ್ನು ದುರುಪಯೋಗ ಮಾಡುವುದನ್ನು ಕಡಿಮೆಮಾಡಬೇಕು. ಮಂತ್ರಿ ಮಂಡಲದ ಸಂಖ್ಯೆಯನ್ನು ಕಡಿಮೆಮಾಡಬೇಕು. ಜಾಸ್ತಿ ಇದ್ದರೆ ಅಂತಹವರನ್ನು ತೆಗೆಯುವ ವ್ಯವಸ್ಥೆ ಮಾಡಿ. ಆ ರೀತಿ ಕಡಿಮೆ ಮಾಡುತ್ತಾರೆಂಬುದೇ ನನಗೆ ಮನಸ್ಸಿನಲ್ಲಿ ಕಾಣುತ್ತದೆ. ದೇಶಕ್ಕೆ ಬೇಕಾದಂತಹ ಅನೇಕ ವಿಚಾರಗಳಿಗೆ ಹಣ ಬೇಕಾಗಿರುವಾಗ ಕೆಲವರು ಕೂಡಿಟ್ಟಿರತಕ್ಕ ಹಣ ಹೊರಗೆ ಬರುವುದಕ್ಕೆ ಏನಾದರೂ ಒಂದು ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕು. ಸಾಮಾನ್ಯವಾಗಿ ತಿನ್ನುವುದಕ್ಕೆ ಇಲ್ಲದೇ ಇರತಕ್ಕ ಜನರ ಮೇಲೆ ಸರ್ಕಾರದವರು ತಮ್ಮ ಇಚ್ಛೆಗೆ ಅನುಸಾರವಾಗಿ ಹೆಚ್ಚಿನ ತೆರಿಗೆಯನ್ನು ಹಾಕುತ್ತಿರುವುದನ್ನು ನೋಡಿದರೆ ಸಾಮಾನ್ಯ ಜನರ ಗತಿ ಏನು ? ಆದ್ದರಿಂದ ಸರ್ಕಾರದವರು ಈ ಬಗ್ಗೆ ಯೋಚನೆ ಮಾಡಬೇಕು. ನನ್ನ ಮಾನ್ಯ ಸ್ನೇಹಿತರಾದ ಶ್ರೀಮಾನ್ ಮುನಿಚಿನ್ನಪ್ಪನವರು ಎಷ್ಟೋ ಲಾರಿಗಳನ್ನು ಇಟ್ಟಿದ್ದಾರೆ ಅಂತಹವರಿಗೆ ಇಂತಹ ತೆರಿಗೆಯಿಂದ ಬಹಳ ಕಷ್ಟವಾಗಬಹುದು. ಆದ್ದರಿಂದ ದಯವಿಟ್ಟು ಇಂತಹ ಸುಂಕದ ಹೊರೆಯನ್ನು ಮತ್ತೆ ಹೇರಬೇಡಿ. ನಾನು ಇನ್ನೂ ಎಷ್ಟೋ ವಿಚಾರಗಳನ್ನು ಈ ಮನೂವೆಯ ಬಗ್ಗೆ ಮಾತನಾಡಬಹುದಾಗಿತ್ತು. ಆದರೆ ಅಧ್ಯಕ್ಷರಿಗೆ ಊಟಕ್ಕೆ ಹೊತ್ತಾಗಿರುವ ಕಾರಣ ಹೆಚ್ಚು ಕಾಲಾವಕಾಶವನ್ನು ತೆಗೆದುಕೊಳ್ಳದೆ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಗೋಪಾಲ ಗೌಡ.—ಇದು ತೆರಿಗೆ ಮನೂವೆಯಾದ್ದರಿಂದ ಇದನ್ನು ವಿರೋಧಿಸಬೇಕಾಗುತ್ತದೆ.

ಅಧ್ಯಕ್ಷರು.—ಒಂದೊಂದು ವಿಷಯವನ್ನು ಮಾತನಾಡಿದರೆ ಎಲ್ಲರಿಗೂ ಅವಕಾಶವನ್ನು ಕಲ್ಪಿಸಿಕೊಡುತ್ತೇನೆ. ಇತರರು ಹೇಳಿದುದನ್ನೇ ಹೇಳುತ್ತಾ ಹೋದರೆ ಅದರಲ್ಲೂ ಬೇರೆ ಬೇರೆ ಸೂಚನೆಗಳು ಬರುವಂತೆ ಇಲ್ಲದಿದ್ದರೆ ಸ್ವಲ್ಪ ಬೇಸರವಾಗುತ್ತದೆ.

ಶ್ರೀ ಎಸ್. ಗೋಪಾಲ ಗೌಡ.—ಮಾನ್ಯ ಅಧ್ಯಕ್ಷರೇ, ಈ ಅಧಿವೇಶನದಲ್ಲಿ ನಾವು ಮೂರನೆಯ ತೆರಿಗೆ ಮಸೂದೆಯನ್ನು ಈಗ ಚರ್ಚೆ ಮಾಡುತ್ತಿದ್ದೇವೆ. ಸನ್ನೆ ಡೀಸಲ್ ಮೇಲೆ ತೆರಿಗೆಯನ್ನು 5 ಪೈಸೆಯಿಂದ 8 ಪೈಸೆಗೆ ಹೆಚ್ಚು ಮಾಡಿದ್ದೇವೆ. ಈಗ ಟ್ರಕ್ಸ್ ಮೇಲೆ 50, 70, 80 ರೂಪಾಯಿ ಗಳಷ್ಟನ್ನು ಒಂದು ಕ್ವಾರ್ಟರಿಗೆ ಹೆಚ್ಚಿಸುತ್ತಿದ್ದೇವೆ. ಈಗಾಗಲೆ ಅವರು ಕ್ವಾರ್ಟರಿಗೆ 650-720 ರೂಪಾಯಿಗಳಷ್ಟನ್ನು ಕೊಡುತ್ತಿದ್ದಾರೆ. ಮಾನ್ಯ ಸಚಿವರು ಹೇಳುತ್ತಿದ್ದಾರೆ, ತೆರಿಗೆಯನ್ನು ಅಷ್ಟೇನೂ ಹೆಚ್ಚಿಗೆ ಏರಿಸಿಲ್ಲವೆಂದು. ಕೇವಲ 150 ರೂಪಾಯಿಗಳನ್ನು ಏರಿಸಿದ್ದಾರೆ. ಸಾಮಾನ್ಯ ವಾಗಿ 50 ರೂಪಾಯಿಗಳು ಕ್ವಾರ್ಟರಿಗೆ ಎಂದರೆ ವರ್ಷಕ್ಕೆ ಎಷ್ಟಾಗುತ್ತದೆಂಬುದನ್ನು ಲೆಕ್ಕಹಾಕ ಬೇಕು. ಇನ್ನು ನಾಲ್ಕನೆಯ ಪಂಚವಾರ್ಷಿಕ ಯೋಜನೆಗೆ ಸರ್ಕಾರಕ್ಕೆ ಹಣ ಜಾಸ್ತಿ ಬೇಕು. ಅದನ್ನು ಪರಿಣಾಮಕಾರಿಯಾಗಿ ಮಾಡುವುದಕ್ಕೆ ಹಣ ಜಾಸ್ತಿ ಸರ್ಕಾರಕ್ಕೆ ಬೇಕಾಗುತ್ತದೆ. ಬೇರೆ ಕಡೆಗಳಲ್ಲಿ ಇದು ಜಾಸ್ತಿ ಇರುವುದರಿಂದ ಈ ಬಗ್ಗೆ ರ್ಯಾಷನಲೈಸೇಷನ್ ತತ್ವವನ್ನು ಅನುಸರಿಸು ತ್ತೇವೆಂದು ಸಾಮಾನ್ಯವಾಗಿ ಸರ್ಕಾರದವರು ಹೇಳುವುದನ್ನು ಈಗಲೂ ಹೇಳುತ್ತಿದ್ದಾರೆ. ನನಗೇನು ಕಳವಳವೆಂದರೆ, ಈಗ ನಾವು ಹಣವನ್ನು ರಕ್ಷಣಾನಿಧಿಗೆ ವಸೂಲು ಮಾಡುತ್ತಿದ್ದೇವೆ. ಒಂದು ಸಾರಿ ನಾನು ಎಲ್ಲೋ ಒಂದು ಪಾರ್ಟಿಂಗ್‌ನಲ್ಲಿದ್ದೆ. ಅಲ್ಲಿ ಒಂದೊಂದು ಲಾರಿಯವರಿಂದ ಒಂದೊಂದು ಸಾವಿರ ರೂಪಾಯಿಗಳನ್ನು ಆ ನಿಧಿಗಾಗಿ ವಸೂಲು ಮಾಡೋಣವೆಂದಿದ್ದರು. ಈ ವಿಷಯ ನನಗೆ ನೇರವಾಗಿ ತಿಳಿದು ಬಂತು.

ಶ್ರೀ ಡಿ. ದೇವರಾಜ್ ಅರಸ್.—ಅದು ತಮ್ಮ ಕಾಲಕ್ಕೇನು ?

ಶ್ರೀ ಎಸ್. ಗೋಪಾಲ ಗೌಡ.—ಡಿಫೆನ್ಸ್ ಫಂಡ್ ಕಮಿಟಿಯಲ್ಲಿ ತಾವು ಇದ್ದೀರಿ. ಮೂಲ ನಿರ್ಣಯದ ಪ್ರಕಾರ ಲಾರಿ ಓನರ್ಸ್ ಹತ್ತಿರ ಎಷ್ಟು ತೆಗೆದುಕೊಳ್ಳಬೇಕು ಎಂಬುದನ್ನು ನೀವು ಮೋಟಾರ್ ವೆಹಿಕಲ್ ಇನ್‌ಸ್ಪೆಕ್ಟರನ್ನು ಆ ಬಗ್ಗೆ ಎಷ್ಟೆಷ್ಟು ವಸೂಲು ಮಾಡಿದ್ದೀರೆಂದು ಕೇಳಬಹುದು ಇನ್ನೊಂದು ವಿಷಯ. ವರ್ಷಕ್ಕೆ ವರ್ಷಕ್ಕೆ ಆಫೀಸಿನಲ್ಲಿ ಡಿಫೆನ್ಸ್‌ಫಂಡ್ ಲೆಕ್ಕದಲ್ಲಿ ಹಣವನ್ನು ಇವರು ವಸೂಲು ಮಾಡುತ್ತಿದ್ದಾರೆ. ಶ್ರೀಮಾನ್ ಮುನಿಚಿನ್ನಪ್ಪನವರು ನುಮಾರು ಶೇಕಡ 75ರಷ್ಟು ಲಾರಿ ಗಳನ್ನು ಪಡೆದಂತಹ ಮಾಲೀಕರಾಗಿದ್ದರೂ ಅವರು ಕೆಲವಾರು ಗೂಡ್ಸ್ ವಹಿಕಲ್ ಲಾರಿಗಳನ್ನು ಹೈರ್ ಪರ್ಚೇಜ್ ಸಿಸ್ಟಂನಲ್ಲಿ ತೆಗೆದುಕೊಂಡು ಬಂದಿರುವವರಾಗಿದ್ದಾರೆ. ಅದನ್ನು ಪ್ರತ್ಯೇಕವಾಗಿ ವಿಚಾರ ಮಾಡುವ ವಿಷಯ. ಆದರೆ ನನಗೆ ಇಲ್ಲಿ ಲಾರಿ ಓನರ್ಸ್ ಪರವಾಗಿ ಭಾಷಣ ಮಾಡುವ ಅಗತ್ಯ ವಿಲ್ಲದಿದ್ದರೂ ಲಾರಿ ಓನರ್ಸ್ ಜವಾಬ್ದಾರಿ ಇಂತಹ ಸಂದರ್ಭದಲ್ಲಿ ಎಷ್ಟು ಮುಖ್ಯವೆಂಬುದನ್ನು ನಾನು ಹೇಳುತ್ತೇನೆ. ಇನ್ನು ಇದರಿಂದ ಬೇರೆ ವಸ್ತುಗಳ ಬೆಲೆ ಎಷ್ಟರಮಟ್ಟಿಗೇರುತ್ತದೆಂಬುದನ್ನು ಸರ್ಕಾರದವರು ಗಮನಿಸಬೇಕು. ಒಟ್ಟಿನಲ್ಲಿ ಇಂತಹ ತೆರಿಗೆಗಳನ್ನು ಹೆಚ್ಚಿಸುವ ವಿಧಾನವೇನೆ ದೆಯೋ ಅದನ್ನು ಸರ್ಕಾರದವರು ಕೈಬಿಡಬೇಕು. ಈಗಿರತಕ್ಕ ತೆರಿಗೆಗಳೇ ಗೂಡ್ಸ್ ವೆಹಿಕಲ್ಸ್ ಮೇಲೆ ಭಾರವಾಗಿ ಏರಿರುವಾಗ ಪುನಃ ಈಗ ಹೆಚ್ಚಿಸುವುದರಿಂದ ಲಾರಿ ಓನರ್ಸ್ ಲಾರಿ ಸರ್ವಿಸ್ಸು ಗಳನ್ನೇ ಕೈಬಿಡುವ ಒಂದು ದುಷ್ಪರಿಣಾಮ ಈ ತೆರಿಗೆಯಿಂದ ಆಗುತ್ತದೆಂದು ಹೇಳಿ ನಾನು ಈ ತೆರಿಗೆ ಮಸೂದೆಯನ್ನು ವಿರೋಧಿಸುತ್ತೇನೆ.

†Sri ANNA RAO GANAMUKHI.—Sir, in the Constitution in the concurrent list, entry 35 states :

> " mechanically propelled vehicles including the principles on which taxes on such vehicles are to be levied."

Here in the Bill it is stated just because the rates of levy of motor vehicles taxes in respect of goods vehicles of certain higher laden weight prevailing in Madras State are slightly higher than those prevailing in Mysore, they want to increase. They should have studied the constituional requirements and stated in the Statement of Objects and Reasons the reasons which led the Government to increase the rate. The other point is the Central Government is going in one direction and the State Government is going in another direction. Recently the Minister for Transport at the Centre stated that the tax on goods vehicles is too heavy as compared to the rates obtaining in other parts of the world and it requires some reduction.

Instead of copying the Centre in this respect, our State is taking th indication from the Madras Government to increase the resources in this way. Sir, it is not a good principle to increase taxes without having regard to the impact it will have on the industry. I want to know whether Government have studied the impact on the industry and the consumer by this levy. If its impact falls on the industry, the industry will be destroyed and many people who are employed in this industry will be displaced. I do not think this is the object of the Government. Sir, because our Government is in the habit of a spending spirit, it is raising the resources. Everywhere huge amounts are spent but the physical targets are not achieved. We are wasting money and there are no returns. This tax will have impact on commodities because it is the commodities that will be carried from place to place. Therefore this increased tax is not called for at this stage.

ಶ್ರೀ ಡಿ. ದೇವರಾಜ ಅರಸ್.—ಸ್ವಾಮಿ, ಇದುವರೆಗೂ ಮಾನ್ಯ ಸದಸ್ಯರು ಈ ಮಸೂದೆಯ ಮೇಲೆ ಹೇಳಿದ್ದನ್ನು ಕೇಳಿದ್ದಾಗಿದೆ. ಈಗ goods transport vehicles and passengers vehicles. ಇದರ ಬಗ್ಗೆ ಇಂಡಿಯಾ ಸರ್ಕಾರದವರು ಈಗ ಭರತಕ್ಕಂಥ ತೆರಿಗೆಯ ಭಾರವನ್ನು ಹೇಗೆ ಸರಿದೂಗಿಸಬೇಕು, ಹೆಚ್ಚಿಗೆ ಇರುವುದನ್ನು ಕಡಿಮೆ ಮಾಡುವುದು ಹೇಗೆ ಎನ್ನುವುದನ್ನು ಯೋಚನೆ ಮಾಡುವುದಕ್ಕೆ ಒಂದು ಕಮಿಟಿಯನ್ನು ನೇಮಕ ಮಾಡಿರುವುದು ನಿಜ. ಈಗ ಆ ಕಮಿಟಿಯವರು ತೆರಿಗೆಯ ಭಾರವನ್ನು ಒಂದೇ ರೀತಿ ಮಾಡುವುದಕ್ಕೆ ಸಾಧ್ಯವಿದೆ. ಆದರೆ ಕಡಿಮೆ ಮಾಡುವುದು ಹೇಗೆ ಎನ್ನುವ ತತ್ವವನ್ನು ಅನುಸರಿಸಿ ಅದನ್ನು ಯೋಚನೆ ಮಾಡಬೇಕು ಎನ್ನುವ ಕಾಲ ಬೇರೆ ಆಗಿತ್ತು. ಶ್ರೀಮಾನ್ ಅಣ್ಣಾರಾಯರು ಹೇಳಿದರು ಈ ವಿಷಯದಲ್ಲಿ ಇಂಡಿಯಾ ಸರ್ಕಾರದವರ ನೀತಿಯೇ ಬೇರೆ ಇದೆಯೆಂದು ಅದು ಪಾಕೀಸ್ತಾನದ ಯುದ್ಧ ಆಗುವುದಕ್ಕೆ ಮುಂಚೆ ಇತ್ತು ಎನ್ನುವುದನ್ನು ಅವರು ಸ್ವಲ್ಪ ಜ್ಞಾಪಕದಲ್ಲಿ ಇಟ್ಟುಕೊಂಡರೆ ಚೆನ್ನಾಗಿರುತ್ತದೆ. ಯುದ್ಧ ಬಂದಾಗ ಭರತಕ್ಕ ಪರಿಸ್ಥಿತಿ ಬೇರೆ ಇದೆ ಎನ್ನುವ ಮಾತನ್ನು ಅವರು ಹೇಳಲಿಲ್ಲ. ಒಂದು ವೇಳೆ ಶಾಂತ ಪರಿಸ್ಥಿತಿ ಬಾರದೇ ಇದ್ದರೆ ಶ್ರೀಮಾನ್ ಅಣ್ಣಾರಾಯರು ಹೇಳಿದಂತೆ ತೆರಿಗೆಯನ್ನು ಹೆಚ್ಚಿಸಬೇಕೇ ಅಥವಾ ಬೇಡವೇ ಎನ್ನುವ ವಿಚಾರದಲ್ಲಿ ಅವರು ಹೇಳಿದಂತಹ ನಲಹೆಗಳನ್ನು ಗಮನಕ್ಕೆ ತೆಗೆದುಕೊಂಡು ಯೋಚನೆ ಮಾಡಬಹುದಾಗಿತ್ತು. ಇವೊತ್ತಿನ ಪರಿಸ್ಥಿತಿಯಲ್ಲಿ ಕೇವಲ ನಾಲ್ಕನೇ ಪಂಚವಾರ್ಷಿಕ ಯೋಜನೆಗೆ ಒದಗಿಸಿರತಕ್ಕ ಹಣ ಎಷ್ಟು ಹೆಚ್ಚಾದರೂ ಅಷ್ಟನ್ನೂ ಕೂಡ ಎರಡು ಬಾಬುಗಳಿಗೆ ಹೆಚ್ಚು ಖರ್ಚು ಮಾಡಬೇಕು ಎನ್ನುವುದು ಇಂಡಿಯಾ ಸರ್ಕಾರದ ನೀತಿಯಾಗಿದೆ. ಆಹಾರವನ್ನು ಹೆಚ್ಚು ಬೆಳೆಯುವುದಕ್ಕೆ ಹಣವನ್ನು ಒದಗಿಸಬೇಕು ಮತ್ತು ಶಸ್ತ್ರಾಸ್ತ್ರಗಳನ್ನು ಒದಗಿಸಿಕೊಳ್ಳುವುದಕ್ಕೆ ಹಣವನ್ನು ಒದಗಿಸಬೇಕು. ದೇಶದಲ್ಲಿ ಶಾಂತ ಪರಿಸ್ಥಿತಿ ಇದೆಯೆಂದು ಹೇಳುವಾಗ ಎಲ್ಲರೂ ಮಾತನಾಡಿ ನಾವು ಯಾವ ತ್ಯಾಗವನ್ನು ಬೇಕಾದರೂ ಮಾಡುವುದಕ್ಕೆ ತಯಾರಾಗಿದ್ದೇವೆ. ನಾವು ದೇಶಕ್ಕಾಗಿ ಏನು ಬೇಕಾದರೂ ಮಾಡುತ್ತೇವೆ, ಪ್ರಾಣವನ್ನು ಕೂಡ ಕೊಡುವುದಕ್ಕೆ ಸಿದ್ಧರಾಗಿದ್ದೇವೆ ಎಂದು ಹೇಳಿ, ಈಗ ಸ್ವಲ್ಪ ದುಡ್ಡು ಕೊಡಿ ಎಂದರೆ ಅವನ್ನು ಕೊಡುವುದು ಕಷ್ಟವಾಗುತ್ತದೆ ಎಂದು ಹೇಳಿದರೆ ಹೇಗೆ? ಮೊಟಾರ್ ವೆಹಿಕಲ್‌ಗಳ ಸ್ಪೇರ್ ಪಾರ್ಟ್ಸ್‌ಗಳು ಸಿಕ್ಕುವುದು ಕಷ್ಟವಾಗಿ ವಾಹನಗಳ ಮಾಲೀಕರಿಗೆ ತೊಂದರೆಯಾಗಿದೆ. ಮತ್ತು ಈ ವೆಹಿಕಲ್‌ಗಳ ಮೇಲೆ ತೆರಿಗೆಯನ್ನು ಹಾಕಿದರೆ ಅದು ಬಳಕೆದಾರರ ಮೇಲೆ ಬೀಳುತ್ತದೆ ಎಂದು ಹೇಳುವುದಾದರೆ ಅದೇ ರೀತಿ ದೇಶದ ವಿಚಾರವನ್ನೂ ಏತಕ್ಕೆ ಹೊಂದಿಲ್ಲ? ಎಲ್ಲ ಜನತೆ ತ್ಯಾಗ ಮಾಡಿ ದುಡ್ಡನ್ನು ಕೊಡುತ್ತಾರೆಯೋ ಅದನ್ನು ಸರಿಯಾಗಿ ಖರ್ಚುಮಾಡಿ ಎಂದು ಮಾತನಾಡಿದರೆ ಸಾಕಾಗುತ್ತದೆ. ಈ ವಿಚಾರಗಳಲ್ಲಿ ಸಾರ್ವಜನಿಕರು ಏನು ಹೇಳುತ್ತಾರೆ ಎಂಬುದು ತಮಗೂ ಗೊತ್ತಿದೆ ನಮಗೂ ಗೊತ್ತಿದೆ. ಯೋಜನೆಗಳನ್ನು ಕಾರ್ಯಗತ ಮಾಡಲು ನಮ್ಮ ರಿಸೋರ್ಸಸ್ ಅನ್ನು ಹೆಚ್ಚುಮಾಡಿಕೊಳ್ಳಲು ಹೆಚ್ಚು ತೆರಿಗೆಯನ್ನು ಹಾಕಬೇಕಾಗಿದೆ ಎಂದು ಹೇಳಿದರೆ ಅದು ಬೇಡ ಎಂದು ಹೇಳಿದರೆ ಅದು ಬಹಳ ಶೋಚನೀಯವಾದದ್ದು. ಬೆಟರ್‌ಮೆಂಟ್ ಲೆವಿ ಹಾಕಿದರೆ ಅದು ರೈತರ ಮೇಲೆ ಬೀಳುತ್ತದೆ ಅದು ಬೇಡ, ಸೇಲ್ಸ್ ಟ್ಯಾಕ್ಸ್, ಇನ್‌ಕಂ ಟ್ಯಾಕ್ಸ್ ಹಾಕಿದರೆ ಅದರಿಂದ ವ್ಯಾಪಾರಗಾರರಿಗೆ ತೊಂದರೆಯಾಗುತ್ತದೆ ಅದು ಬೇಡ ಎಂದು ಹೇಳಿದರೆ ಇನ್ನು ಯಾವುದರ ಮೇಲೆ ತೆರಿಗೆಯನ್ನು ಹಾಕಬೇಕು. ನಮ್ಮ ದೇಶದಲ್ಲಿ ಇರುವವರೆಲ್ಲಾ ಬಡವರೇ ನಾವು ಮಾತ್ರ ಐಶ್ವರ್ಯವಂತರೆಂದು ಕಾಣುತ್ತದೆ. ಈ ಒಂದು ಮೋಟಾರ್ ವೆಹಿಕಲ್

(ಶ್ರೀ ಡಿ. ದೇವರಾಜ ಅರಸ್)

ಗಳ ಮೇಲೆ ತೆರಿಗೆಯನ್ನು ಹಾಕುವುದಕ್ಕೆ ಯೋಚನೆ ಮಾಡುವಾಗ ಈ ಇಂಡಸ್ಟ್ರೀಗೆ ಸಂಬಂಧಪಟ್ಟ ಆಗುಹೋಗುಗಳೇನು ಇವೆ, ಕಷ್ಟ ನುಖಗಳೇನಿವೆ ಎಂಬುದು ಸರ್ಕಾರಕ್ಕೂ ಗೊತ್ತಿದೆ. ಶ್ರೀಮಾನ ಮುಕ್ಕಣ್ಣಪ್ಪನವರು ರೋಡ್ ಟ್ರಾನ್ಸ್‌ಪೋರ್ಟ್ ನ್ಯಾಷನಲೈಸ್ ವಿಷಯದಲ್ಲಿ ಕೆಲವು ವಿಚಾರ ಗಳನ್ನು ಹೇಳಿದರು. ಈಗ ಸರ್ಕಾರದವರು ನ್ಯಾಷನಲೈಸ್ ಮಾಡಬೇಕಾಗಿರತಕ್ಕ ಕೆಲವು ಬಸ್ ರೂಟುಗಳು ಏನಿವೆ ಅವುಗಳನ್ನು ನ್ಯಾಷನಲೈಸ್ ಮಾಡುವುದಕ್ಕೆ ಅನೇಕ ಅಡಚಣೆಗಳಿವೆ. ಆದ್ದರಿಂದ ಈಗ ಅವುಗಳನ್ನು ನ್ಯಾಷನಲೈಸ್ ಮಾಡುವುದಕ್ಕೆ ಸಾಧ್ಯವಿಲ್ಲ. ಈ ವಿಚಾರದಲ್ಲ ನಾವು ಇಂಡಿಯಾ ಸರ್ಕಾರದವರ ನೀತಿಯನ್ನು ಅನುಸರಿಸಬೇಕಾಗಿದೆ. ಅದಕ್ಕೆ ಅನೇಕ ಕಾರಣಗಳಿವೆ. ಅದಕ್ಕೆ ಸಾಕಷ್ಟು ಹಣವನ್ನು ಒದಗಿಸಬೇಕಾಗಿದೆ. ಆದ್ದರಿಂದ ಆ ರೂಟುಗಳನ್ನು ನ್ಯಾಷನಲೈಸ್ ಮಾಡುವು ದಕ್ಕೆ ಹಣವನ್ನು ಖರ್ಚು ಮಾಡಲು ಕ್ಯಾಪಿಟಲ್ ಇನ್‌ವೆಸ್ಟ್ ಮಾಡುವುದಕ್ಕೆ ಈಗ ಸಾಧ್ಯವಿಲ್ಲ ಎಂದು ಅದನ್ನು ಕೈಬಿಡಬೇಕಾಗಿದೆ. ಆ ಮಾತು ಬೇರೆ. ಈ ಸಂದರ್ಭದಲ್ಲಿ ಖಚಿತವಾದ ಅಭಿಪ್ರಾಯವನ್ನು ತಮ್ಮ ಮುಂದೆ ಇಡುವುದಾದರೆ ಈಗ ದೇಶದಲ್ಲಿ ತುರ್ತು ಪರಿಸ್ಥಿತಿ ಇರದಿದ್ದರೆ ಸರ್ಕಾರದವರು ಈ ತೆರಿಗೆಯನ್ನು ಹೆಚ್ಚಿಸುವುದಕ್ಕೆ ಮನಸ್ಸು ಮಾಡುತ್ತಿರಲಿಲ್ಲ. ಅದೂ ಅಲ್ಲದೆ ಇಂಡಿಯಾ ಸರ್ಕಾರದವರೂ ಕೂಡ ಈ ತೆರಿಗೆಯನ್ನು ಪುನರ್ವಿಮರ್ಶೆ ಮಾಡುವ ಸಂದರ್ಭ ಕಾಣುತ್ತಿದೆ. ಈಗ ಯಾವ ಯಾವ ಬಾಬುಗಳಿಂದ ನಮಗೆ ಸ್ವಲ್ಪ ಆದಾಯ ಬರುತ್ತದೆ ಎಂದು ಕಂಡು ಬಂದರೂ ಕೂಡ ನಾವು ಅದನ್ನು ಯೋಚನೆ ಮಾಡಬೇಕು ಮತ್ತು ಗಳಿಸಬೇಕು. ಈಗ ನೆರೆಹೊರೆಯ ಪ್ರಾಂತ್ಯ ಗಳಲ್ಲಿರತಕ್ಕ ತೆರಿಗೆಗಳನ್ನು ನೋಡುವುದಾದರೆ ಕೇರಳದಲ್ಲಿ ನಮ್ಮಷ್ಟೆ ಇದೆ. ಮದ್ರಾಸಿನಲ್ಲಿ ನನಗಿಂತ ಜಾಸ್ತಿ ಇದೆ. ಮಹಾರಾಷ್ಟ್ರದಲ್ಲಿ ನಮಗಿಂತ ಜಾಸ್ತಿ ಇದೆ. ಆಂಧ್ರ ಪ್ರಾಂತ್ಯದಲ್ಲಿ ಗುಡ್ಸ್ ಅಂಡ್ ವೆಹಿಕಲ್ಸ್ ಟ್ಯಾಕ್ಸ್ ಮತ್ತು ಟಿ. ಪಿ. ಜಿ. ಟ್ಯಾಕ್ಸ್ ಎರಡನ್ನೂ ಒಂದಾಗಿ ಮಾಡಿ ಅಲ್ಲಿ ಟ್ಯಾಕ್ಸ್ ಹಾಕಿದ್ದಾರೆ. ಇದುಎಲ್ಲರಿಗೂ ಗೊತ್ತಿರತಕ್ಕ ಸಂಗತಿ. ಈಗ ಮದ್ರಾಸ್ ಪ್ರಾಂತದಲ್ಲಿ ಏನು ತೆರಿಗೆಯನ್ನು ಹಾಕಿದ್ದಾರೋ ಆ ಮಟ್ಟಕ್ಕೆ ನಾವು ಏರಿಸಿದ್ದೇವೆ. ಇನ್ನೂ ಒಂದು ಮಾತನ್ನು ಶ್ರೀ ಕೃಷ್ಣಾರವರು ಹೇಳಿದರು. ಅದೇನೆಂದರೆ, ಕನ್‌ಸ್ಯೂಮರು ಗಳ ಮೇಲೆ ಈ ತೆರಿಗೆ ಬೀಳುತ್ತದೆಂದು. ನಿಜ, ಸ್ವಲ್ಪಮಟ್ಟಿಗೆ, ಯಾವ ತೆರಿಗೆ ಹಾಕಿದರೂ, ಕನ್‌ಸ್ಯೂಮರುಗಳ ಮೇಲೆ ಬಿದ್ದೇಬೀಳುತ್ತದೆ. ಒಬ್ಬ ಮಾನ್ಯ ಸದಸ್ಯರು ಹೇಳುತ್ತಾರೆ, ಈಗ ವೆಹಿಕಲ್ಸ್ ಇಟ್ಟುಕೊಂಡಿರುವವರು 40 ಸಾವಿರ ಕೊಡುವ ಕಡೆ 60 ಸಾವಿರ ರೂಪಾಯಿ ಕೊಡುತ್ತಾರೆಂದು. ಆದರೆ ನಮ್ಮಲ್ಲಿ 40 ಸಾವಿರ ರೂಪಾಯಿ ಕ್ಯಾಪಿಟಲ್ ಇನ್‌ವೆಸ್ಟ್ ಮಾಡುವ ಜನ ಎಷ್ಟು ಇದ್ದಾರೆ ? ಸಾವಿರಾರು ಜನರು ಇದ್ದಾರೆ ಅಂತ ಇಟ್ಟುಕೊಂಡರೂ, ಆ ಸಾವಿರಾರು ಜನರು ತೆರಿಗೆಯನ್ನು ಸ್ವಲ್ಪ ಹೊರಬೇಕು. ನೂರು ರೂಪಾಯಿ ಕ್ಯಾಪಿಟಲ್ ಇನ್‌ವೆಸ್ಟ್ ಮಾಡುವವರನ್ನೂ ಗಣನೆಗೆ ತೆಗೆದುಕೊಂಡಿದೆ. ಅಂಥಾದ್ದರಲ್ಲಿ ಲಕ್ಷಾಂತರ ರೂಪಾಯಿ ಇನ್‌ವೆಸ್ಟ್ ಮಾಡಿರುವವರೂ ಹೊರಬೇಕು. ಆದರೆ ಮಾನ್ಯ ಸದಸ್ಯರು ಇಬ್ಬರನ್ನೂ ಒಂದೇ ಲೆವಲ್ಲಗೆ ಸೇರಿಸಿ, ಒಂದೇ ತಕ್ಕಡಿಯಲ್ಲಿ ತೂಗತಕ್ಕಂಥ ವಕ್ರ ದೃಷ್ಟಿ ಉಳ್ಳವರು ಎಂದು ಹೇಳಬೇಕಾಗಿದೆ. ಆದ್ದರಿಂದ ನಾವು ಈಗ ತಂದಿರತಕ್ಕಂಥ ತೆರಿಗೆಯನ್ನು ಉಳಿದ ಕಡೆಗಳ ತೆರಿಗೆಗಳೊಂದಿಗೆ ಹೋಲಿಸಿ ನೋಡಿದರೆ, ಯಾವುದೇ ಒಂದು ಸಂದರ್ಭದಲ್ಲಿ ಕೊನೆಯದಾಗಿದೆ. ಪಾರ್ಟ್ 'ಎ'ನಲ್ಲಿ ಒಂದು ಐಟಮ್ಮಿನಲ್ಲಿ ಮಾತ್ರ 80 ರೂಪಾಯಿ ಜಾಸ್ತಿಯಾಗಿದೆ. ಒಂದು ಕ್ವಾರ್ಟರಿಗೆ ಈ ಬಗ್ಗೆ 50 ರೂಪಾಯಿ ಜಾಸ್ತಿ ಯಾಗಿರತಕ್ಕಂಥಾದ್ದು ಈ ಒಂದು ಸಂದರ್ಭದಲ್ಲಿ ಸೂಕ್ತವಾಗಿಯೆ ಇದೆ. ಬರೀ ಗೂಡ್ಸ್ ವೆಹಿಕಲ್ಸು ಗಳ ಮೇಲೆ ಅಲ್ಲದೆ, ಪ್ಯಾಸೆಂಜರ್ ವೆಹಿಕಲ್ಲುಗಳ ಮೇಲೂ ತೆರಿಗೆ ಹೆಚ್ಚಿಸಬೇಕು ಅನ್ನುವುದನ್ನು ಯೋಚನೆ ಮಾಡಿದೆ. ಈ ಒಂದು ವಿಶೇಷ ಸಂದರ್ಭವನ್ನು ಗಮನದಲ್ಲಿಟ್ಟುಕೊಂಡು, ಈ ಮಸೂದೆ ಯನ್ನು ಒಪ್ಪಿಕೊಳ್ಳಬೇಕು.

Mr. SPEAKER.—The question is :

"That the Mysore Motor Vehicles Taxation (Amendment) Bill, 1965, be taken into consideration."

The motion was adopted.

CLAUSE 2

Sri D. DEVARAJ URS.—Sir, I beg to move:

"That in sub-clause (2) for the words and figures, for item 5, the following item shall be substituted, namely :—

'5. Goods Vehicles :—

"(i) the words figures, brackets and letter 'in item 5, for paras (e) to (1) of sub-item (i), and

"(ii), the following paras and sub-item shall be substituted, namely :—"shall be substituted.'

Mr. SPEAKER.—Amendment moved.

"That in sub-clause (2) for the words and figures, "for item 5, the following item shall be substituted, namely :—

'5. Goods Vehicles :—

"(i) the words figures, brackets and letter 'in item 5, for paras (e) to (1) of sub-item (1), and

"(ii), the following parasand sub-item shall be substituted, namely :—" shall be substituted.'

Sri D. DEVARAJ URS.—Sir, this is only an amendment to rectify what has been omitted. There was an omission and it is just an insertion. This may be accepted.

Mr. SPEAKER.—The question is:

"That in sub-clause (2) for the words and figures, 'for item 5, the following item shall be substituted, namely :—

'5. Goods Vehicles :—

"(i) the words figures, brackets and letter 'in item 5, for paras (e) to (1) of sub-item (1), and

"(ii), the following paras and sub-item shall be substituted, namely :—" shall be substituted.'

The amendment was adopted

Mr. SPEAKER.—The question is:

"That clause 2, as amended, stand part of the Bill.

The motion was adopted

Clause 2, as amended, was added to the Bill.

CLAUSE 1, THE TITLE AND THE PREAMBLE.

Mr. SPEAKER.—The question is :

"That clause 1, the Title and the Preamble stand part of the Bill."

The motion was adopted

Clause 1, the Title and the Preamble were added to the Bill.

Motion to pass

Sri D. DEVARAJ URS.—Sir, I beg to move :

"That the Mysore Motor Vehicles Taxation (Amendment) Bill, 1965, as amended, be passed."

Mr. SPEAKER.—The question is :

"That the Mysore Motor Vehicles Taxation (Amendment) Bill, 1965, as amended, be passed."

The motion was adopted.

Business of the House.

Mr. SPEAKER.—I would like to assess the situation a little. We have been going very slowly. We are struggling between two view-points : We have to adhere to the time schedule and complete the work before we adjourn. We want to adjourn for Deepawali. Another thing I find is that every member without previously telling me wants permission to participate. They say they have new points but only repeat what other members have said. The only way I can solve it is by simply putting the question to the House and ask the House when shall we adjourn and abide by the decision of the House.

Sri S. SIVAPPA.—There are some more Bills which the Treasury Benches want to push through.

Sri RAMAKRISHNA HEGDE.—The following Bills are very important and the House should take a decision on them during the current session itself.—

1. The Mysore Local Authorities (Postponement of elections and continuance of Administrators) Bill, 1965.
2. The Mysore State Civil Services—Class III Posts Recruitment (Validation) Bill, 1965.
3. The Bangalore Water Supply and Sewerage (Amendment) Bill, 1965.

Mr. SPEAKER.—The Business Advisory Committee has allotted 2 hours for Gopala Gowda's resolution. I think we can take it first if the House agrees. Then, we shall take the Bangalore Water Supply and Sewerage (Amendment) Bill, 1965.

Sri S. SIVAPPA.—The Hon'ble Minister has suggested which are the important measures which should be adopted by this House. If they are to be passed, it will not be possible before Deepavali. So, we have to adjourn and meet somewhere on the 25th or 26th.

Sri RAMAKRISHNA HEGDE.—Even considering the maximum time that has been allotted by the Business Advisory Committee for these